ಜಗದ್ಗುರು-ಶ್ರೀಮದಭಿನವ-ವಿದ್ಯಾತೀರ್ಥ-ಮಹಾಸ್ವಾಮಿ-ಸಾಧನ-ಜೀವನ್ಮುಕ್ತ್ಯಾಪ್ತಿ-ಲೀಲಾಶತಕಮ್

ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು
ಆಧ್ಯಾತ್ಮಿಕ ಸಾಧನೆಯನ್ನು ಕೈಗೊಂಡು
ಜೀವನ್ಮುಕ್ತಿಯನ್ನು ಪಡೆದ ದಿವ್ಯಲೀಲೆಯ ಶತಕ



ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು,
ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ
35ನೆಯ ಜಗದ್ಗುರು ಶಂಕರಾಚಾರ್ಯರು

ಜಗದ್ಗುರು-ಶ್ರೀಮದಭಿನವ-ವಿದ್ಯಾತೀರ್ಥ-ಮಹಾಸ್ವಾಮಿ-ಸಾಧನ-ಜೀವನ್ಮುಕ್ತ್ಯಾಪ್ತಿ-ಲೀಲಾಶತಕಮ್

ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಆಧ್ಯಾತ್ಮಿಕ ಸಾಧನೆಯನ್ನು ಕೈಗೊಂಡು ಜೀವನ್ಮುಕ್ತಿಯನ್ನು ಪಡೆದ ದಿವ್ಯಲೀಲೆಯ ಶತಕ

[ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ
ಸ್ವಹಸ್ತ ಲಿಖಿತ ಮತ್ತು ಹಸ್ತಾಕ್ಷರ ಸಹಿತ ಶ್ರೀಮುಖದಿಂದ ಅಲಂಕೃತ]

ಅನುವಾದಕ: ಡಾ. ಹೆ. ನ. ಶಂಕರ



ಸೆಂಟರ್ ಫಾರ್ ಬ್ರಹ್ಮವಿದ್ಯಾ
ಚೆನ್ನೈ

Book Title

Jagadguru-Śrīmad-Abhinava-Vidyātīrtha-Mahāsvāmi-Sādhana-Jīvanmuktyāpti-Līlāśatakam

Jagadguru Śrī Abhinava Vidyātīrtha Mahāsvāmigaḷu ādhyātmika sādhaneyannu kaigoṇḍa mattu jīvanmuktiyannu paḍeda divyalīleya śataka

Language

Kannada

Published by

Centre for Brahmavidya
SVK Towers, 8th Floor
A25, Industrial Estate, Guindy
Chennai 600032


Email: contact@centreforbrahmavidya.org

Website: www.centreforbrahmavidya.org

EBook: First Edition (2026)

For free download

ಸಮರ್ಪಣೆ



ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು

ಪರಬ್ರಹ್ಮಮಾಯೇಶಕಾರುಣ್ಯಸಿನ್ಧುಂ ಸ್ವಮಾಯಾಧೃತಾಬ್ಧಿಂ ಸದಾ ಬನ್ಧಶೂನ್ಯಮ್।
ಕೃತಾಧ್ಯಾತ್ಮಿಕಾಭ್ಯಾಸಸಿದ್ಧ್ಯಾಪ್ತಿಲೀಲಂ ಭವಾಚಾರ್ಯಮತ್ಕೃತ್ಸ್ನಮೇಕಂ ಪ್ರಪದ್ಯೇ॥


(ಪರಬ್ರಹ್ಮಸ್ವರೂಪರೂ, ಮಾಯೆಯ ಒಡೆಯರೂ, ಕರುಣಾಸಾಗರರೂ, ತಮ್ಮದೇ ಆದ ಮಾಯೆಯಿಂದ ದೇಹವನ್ನು ಧರಿಸಿದವರೂ, ಎಂದೆಂದಿಗೂ ಯಾವುದೇ ಬಂಧನಕ್ಕೂ ಒಳಗಾಗದವರೂ, ಆಧ್ಯಾತ್ಮಿಕ ಸಾಧನೆಯನ್ನು ಕೈಗೊಂಡು ಪರಿಪೂರ್ಣತೆಯನ್ನು ಹೊಂದಿದ ದಿವ್ಯಲೀಲೆಯನ್ನು ತೋರಿದವರೂ, ಜಗದ್ಗುರುಗಳೂ ಹಾಗೂ ನನ್ನ ಸರ್ವಸ್ವರೂ ಆದ ಅವರಲ್ಲಿಯೇ ನಾನು ಶರಣು ಹೊಂದುತ್ತೇನೆ.)

ಇಮಾಂ ಕೃತಿಂ ಮತ್ಪರಮಪೂಜ್ಯ-ಸದ್ಗುರು-ಶ್ರೀಮದಭಿನವ-ವಿದ್ಯಾತೀರ್ಥ-ಮಹಾಸ್ವಾಮಿನಾಂ ಪಾದಪದ್ಮಯೋಃ
ತ್ವದೀಯಂ ವಸ್ತು ಗೋವಿನ್ದ ತುಭ್ಯಮೇವ ಸಮರ್ಪಯೇ ಇತಿ ಭಾವೇನ ಸಪ್ರಣಾಮಂ ಸಮರ್ಪಯೇ |

(ನನಗೆ ಶ್ರೇಷ್ಠತಮ ಪೂಜ್ಯರೂ, ಸ್ವತಃ ಪ್ರಬುದ್ಧರೂ ಮತ್ತು ಇತರರಿಗೆ ಸಾಕ್ಷಾತ್ಕಾರವನ್ನು ಅನುಗ್ರಹಿಸುವವರೂ ಆದ ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ಪಾದಕಮಲಗಳಿಗೆ, 'ಹೇ ಪ್ರಭು, ನಿನ್ನದೇ ಆದುದನ್ನು ನಿನಗೇ ಅರ್ಪಿಸುತ್ತೇನೆ' ಎಂಬ ಭಾವನೆಯಿಂದ, ನನ್ನ ನಮಸ್ಕಾರಗಳೊಂದಿಗೆ ಈ ಕೃತಿಯನ್ನು ಅರ್ಪಿಸುತ್ತೇನೆ.)



ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ತಮ್ಮ ಗುರುಗಳು
ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳನ್ನು ವಂದಿಸುತ್ತಿರುವುದು



ಪರಮಪೂಜ್ಯ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ತಮ್ಮ ಗುರುಗಳು
ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳನ್ನು ವಂದಿಸುತ್ತಿರುವುದು



श्रीशारदापीठम्, शृङ्गेरी

परम पूजनीयाः अस्मद्गुरुचरणाः जगद्गुरु श्रीमद्भिनवविद्यातीर्थ महास्वामिनः स्वीये चतुर्दशे वयसि स्वीकृतपारमहंस्याः जन्मान्तरीय सुकृत परिपाकवशात् स्वदेशिकवर्येण जगद्गुरु श्री-चन्द्रशेखरभारती महास्वामि-चरणानां निरवग्रहानुग्रहेण-च स्वीये अष्टादशे वयसि युव मार्गशीर्ष कृष्णद्वितीयायां ब्रह्मसाक्षात्कार मवाप्य जीवन्मुक्तिसुख मन्वभूवन्। तादृक्तिकं तेषा मनुभवं तदीय मुखारविन्दादेवश्रुत्वा अवागमत् तेषा मस्माकंच प्रियशिष्यः श्रीमान् उमेशब्रह्मचारी। सच स्वेनावगतं तमपूर्वं विषयं श्लोकशतेन उपनिबध्य अस्मान् प्रादर्शयत्। वयंच तदवलोक्य नितरा ममोदिष्महि। ईदृशं पुण्यश्लोकाना मपूर्वमनुभवं अनेन श्लोकशतेनावगत्य लोकाः कृतार्था भूयासु रित्याशास्महे।

शृंगगिरिः

विश्वावसु श्रावण कृष्ण त्रयोदशी

गुरुवासरः २१-८-२०२५

इति नारायण स्मरणम्

भारती तीर्थः

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಶ್ರೀಮುಖದ ಭಾವಾನುವಾದ

ಪರಮಪೂಜನೀಯರಾದ ನಮ್ಮ ಗುರುವರೇಣ್ಯರಾದ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ತಮಗೆ ಹದಿನಾಲ್ಕನೆಯ ವರ್ಷ ತುಂಬುವುದಕ್ಕೆ ಮುನ್ನವೇ ಪರಮಹಂಸ-ಸಂನ್ಯಾಸ ಆಶ್ರಮವನ್ನು ಸ್ವೀಕರಿಸಿದರು. ತಮ್ಮ ಪೂರ್ವಜನ್ಮಗಳ ಪುಣ್ಯಫಲದ ಪರಿಪಾಕದಿಂದ ಹಾಗೂ ತಮ್ಮ ಶ್ರೇಷ್ಠ ಗುರುವರ್ಯರಾದ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಅವ್ಯಾಹತ ಅನುಗ್ರಹದಿಂದ ಅವರು ಯುವ-ಸಂವತ್ಸರದ ಮಾರ್ಗಶೀರ್ಷ ಕೃಷ್ಣ ದ್ವಿತೀಯೆಯಂದು (1935ರ ಡಿಸೆಂಬರ್ 12ರಂದು) ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಪರಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದರು; ಅಂದಿನಿಂದಲೂ ಅವರು ಜೀವನ್ಮುಕ್ತಿಯ (ಜೀವಂತರಾಗಿದ್ದಾಗಲೇ ಸಂಸಾರದ ಬಂಧನದಿಂದ ಮುಕ್ತಿಯ) ಆನಂದದಲ್ಲಿ ನೆಲೆಸಿದರು. ಅವರು ತಮ್ಮ ಯೌವನದಲ್ಲಿ ಸಾಕ್ಷಾತ್ಕಾರವನ್ನು ಮತ್ತು ಜೀವನ್ಮುಕ್ತಿಯನ್ನು ಪಡೆದ ಸಕಲ ವಿವರಗಳನ್ನು ಸಾಕ್ಷಾತ್ ಅವರ ಮುಖಾರವಿಂದದಿಂದಲೇ ಆಲಿಸಿದ, ಅವರ ಹಾಗೂ ನಮ್ಮ ಪ್ರಿಯ ಶಿಷ್ಯ, ಬ್ರಹ್ಮಚಾರಿ ಶ್ರೀಮಾನ್ ಉಮೇಶ್ ಅವುಗಳನ್ನು ಸ್ಪಷ್ಟವಾಗಿ ಗ್ರಹಿಸಿ-ಕೊಂಡರು. ತಾವು ಗ್ರಹಿಸಿದ ಆ ಅಪೂರ್ವ ವಿಷಯವನ್ನು ಶ್ಲೋಕ-ಶತಕದಲ್ಲಿ ಅಳವಡಿಸಿ ಅದನ್ನು ನಮಗೆ ತೋರಿಸಿದರು. ನಾವದನ್ನು ಅವಲೋಕಿಸಿ ಬಹಳ ಸಂತೋಷಪಟ್ಟೆವು. ಮಹಾಮಹಿಮರೂ, ಸ್ತುತ್ಯರೂ ಆದ ನಮ್ಮ ಗುರುಗಳ ಜೀವನ್ಮುಕ್ತಿಯ ಆನಂದದ ಅನುಪಮ ಪ್ರಾಪ್ತಿಯ ವಿಷಯವನ್ನು ಜನರು ಈ ಶ್ಲೋಕಗಳಿಂದ ಅರಿತುಕೊಂಡು ತನ್ಮೂಲಕ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಲಿ ಎಂದು ನಾವು ಆಶೀರ್ವದಿಸುತ್ತೇವೆ.

ನಾರಾಯಣನ ಸ್ಮರಣೆಯೊಂದಿಗೆ
(ಹಸ್ತಾಕ್ಷರ — ಭಾರತೀ ತೀರ್ಥ)

ಶೃಂಗೇರಿ
ವಿಶ್ವಾವಸು ಶ್ರಾವಣ ಕೃಷ್ಣತ್ರಯೋದಶೀ
ಗುರುವಾರ; 21.08.2025

ಮುನ್ನುಡಿ

ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು — ಅಪಾರ ಕರುಣೆಯಿಂದ ಕೂಡಿದ ಋಷಿವರೇಣ್ಯರು ಹಾಗೂ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠವನ್ನು ಅದರ 35ನೆಯ ಜಗದ್ಗುರು ಶಂಕರಾಚಾರ್ಯರಾಗಿ 35 ವರ್ಷಗಳ ಕಾಲ ಅಲಂಕರಿಸಿದವರು — 1917ರ ನವೆಂಬರ್ 13ರಂದು ಜನ್ಮತಾಳಿದರು. ಅವರಿಗೆ ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು 1931ರ ಮೇ 22ರಂದು ಸಂನ್ಯಾಸದೀಕ್ಷೆಯನ್ನು ನೀಡಿದರು. ತಮ್ಮ ಸಂನ್ಯಾಸ ಸ್ವೀಕಾರದ ದಿನದಿಂದಲೇ ಗುರುಗಳು ಆಧ್ಯಾತ್ಮಿಕ ಸಾಧನೆಗಳಲ್ಲಿ ಅತ್ಯಂತ ಗಾಢವಾಗಿ ತೊಡಗಿಕೊಂಡರು. ಆ ಸಾಧನೆಗಳು 1935ರ ಡಿಸೆಂಬರ್ 12ರಂದು ಅವರ ಪರಬ್ರಹ್ಮ-ಸಾಕ್ಷಾತ್ಕಾರವನ್ನು ಹೊಂದುವುದರೊಂದಿಗೆ ಹಾಗೂ ಆ ಬಳಿಕ ಅತ್ಯಂತ ಮಹಿಮಾವಂತ ಜೀವನ್ಮುಕ್ತರಾಗಿ (ಜೀವಂತರಾಗಿದ್ದಾಗಲೇ ಸಂಸಾರದ ಬಂಧನದಿಂದ ಮುಕ್ತರಾಗಿ) ಅವರು ಪರಬ್ರಹ್ಮದಲ್ಲೇ ಅಚಲವಾಗಿ ನೆಲೆಸುವುದರೊಂದಿಗೆ ಪೂರ್ಣಗೊಂಡವು. ಪ್ರಖ್ಯಾತ ಜೀವನ್ಮುಕ್ತರಾಗಿದ್ದ ಮಹಾಸ್ವಾಮಿಗಳ ಗುರುಗಳು, ತಮ್ಮ ಶಿಷ್ಯರ ಜ್ಞಾನಪ್ರಾಪ್ತಿಯನ್ನು ತಡವಿಲ್ಲದೆ ಗುರುತಿಸಿದರು; ಜೀವನ್ಮುಕ್ತರ ಕುರಿತ ಶಾಸ್ತ್ರಗಳ ವಾಕ್ಯಗಳನ್ನು ಉಲ್ಲೇಖಿಸುತ್ತಾ, ಅವೆಲ್ಲವೂ ಅವರಿಗೆ ಸಂಪೂರ್ಣವಾಗಿ ಅನ್ವಯಿಸುತ್ತವೆ ಎಂದು ನಿಸ್ಸಂದಿಗ್ಧವಾಗಿ ಘೋಷಿಸಿದರು. ಗುರುಗಳು ಮಾನುಷರೂಪವನ್ನು ತಾಳಿದ ಸಾಕ್ಷಾತ್ ಭಗವಂತನೇ ಆಗಿದ್ದು, ಆಧ್ಯಾತ್ಮಿಕ ಸಾಧನೆಗಳನ್ನು ಕೈಗೊಂಡು, ಆ ಮೂಲಕ ಪ್ರಬುದ್ಧರಾಗಿ ಮುಕ್ತರಾದುದು ಕೇವಲ ಅವರ ದಿವ್ಯಲೀಲೆಯೇ ಆಗಿತ್ತು ಎಂದೂ ತಮಗೆ ಸ್ಪಷ್ಟವಾಗಿ ವಿದಿತವಾಗಿತ್ತು ಎಂದು ಅವರ ಗುರುಗಳು ಆ ನಂತರ ತಿಳಿಸಿದರು. 1943ರಲ್ಲಿ ತಮ್ಮ ಶಿಷ್ಯರ ಕುರಿತು ಕೆಲವು ಶ್ಲೋಕಗಳನ್ನೂ ರಚಿಸಿದರು; ಅವುಗಳಲ್ಲೊಂದರಲ್ಲಿ — ವಿವೇಕಿಗಳು ಅವರನ್ನು ತಮ್ಮ ಹೃದಯದಲ್ಲಿ ಧರಿಸಬೇಕು, ಅವರು ಸಾಕ್ಷಾತ್ ಪರಬ್ರಹ್ಮವೇ ಆಗಿದ್ದಾರೆ, ಪ್ರಣವದ (ಓಂಕಾರದ) ಮೂಲಕ ಅವರು ಅರಿಯಲ್ಪಡುವವರು ಮತ್ತು ಇಡೀ ಜಗತ್ತಿನ ಪಾಲನೆಯನ್ನು ನಿರ್ವಹಿಸುವಲ್ಲಿ ಸಮರ್ಥರು — ಎಂದಿದ್ದಾರೆ. ನನ್ನ ದಿವ್ಯ ಗುರುಗಳು ತಮ್ಮ ಅಪಾರ ಕರುಣೆಯಿಂದ ತಮ್ಮ ದೇಹತ್ಯಾಗಕ್ಕೆ ಒಂದು ತಿಂಗಳು ಮುನ್ನದವರೆಗೆ, ಹಲವು ವರ್ಷಗಳ ಅವಧಿಯಲ್ಲಿ, ತಮ್ಮ ಸಾಧನೆ ಮತ್ತು ಅದರ ಪರಿಪೂರ್ಣತೆಯ ಸಮಗ್ರ ವಿವರಗಳನ್ನು ನನಗೆ ಅನುಗ್ರಹಿಸಿದರು. ಈ ಮಾಹಿತಿಯ ಕೆಲ ಅಂಶಗಳನ್ನು ಅವರ ಜೀವನ ಮತ್ತು ಉಪದೇಶಗಳನ್ನು ಕುರಿತ ಎರಡು ಸಂಪುಟಗಳ ಗ್ರಂಥದಲ್ಲಿ ಕ್ರೋಢೀಕರಿಸಿ, 1984ರಲ್ಲಿ ಅವುಗಳನ್ನು ಭಕ್ತಿಪೂರ್ವಕವಾಗಿ ಅವರ ಪಾದಕಮಲಗಳಿಗೆ ಸಮರ್ಪಿಸಿದೆ.

ಗುರುಗಳು 1989ರಲ್ಲಿ ದೇಹತ್ಯಾಗ ಮಾಡಿದ ಕೆಲವು ವರ್ಷಗಳ ಬಳಿಕ, ಅವರ ಸಾಧನೆಯ ಸಂಪೂರ್ಣ ವಿವರಗಳನ್ನು ಬರೆಯುವಂತೆ ಶೃಂಗೇರಿ ಶ್ರೀ ಶಾರದಾ ಪೀಠದ ಈಗಿನ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು

ನನಗೆ ಆದೇಶವಿತ್ತರು. ನಾನು ಅದನ್ನು ಸಿದ್ಧಗೊಳಿಸಿ ಅವರಿಗೆ ಸಮರ್ಪಿಸಿದೆ. ಅದರಿಂದ ಸಂಪೂರ್ಣವಾಗಿ ತೃಪ್ತರಾದ ಅವರು, ಅದನ್ನು ಪ್ರಕಟಿಸುವಂತೆ ನಿರ್ದೇಶಿಸಿ ತಮ್ಮ ಶ್ರೀಮುಖದಿಂದ ಆ ಗ್ರಂಥವನ್ನು ಆಶೀರ್ವದಿಸಿದರು. 'Yoga, Enlightenment and Perfection' ಎಂಬ ಆ ಆಂಗ್ಲ ಗ್ರಂಥವು ಮೊದಲ ಬಾರಿಗೆ 1999ರಲ್ಲಿ ಪ್ರಕಟವಾಯಿತು. ಅಂದಿನಿಂದ ಈವರೆಗೆ ಅದು ಅನೇಕ ಬಾರಿ ಪುನರ್ಮುದ್ರಿತವಾಗಿದೆ. ಅದರ ಉಚಿತ ಡಿಜಿಟಲ್ ಆವೃತ್ತಿಯ 20 ಲಕ್ಷಕ್ಕೂ ಹೆಚ್ಚು ಪ್ರತಿಗಳು ಡೌನ್‌ಲೋಡ್ ಮಾಡಲಾಗಿವೆ.

ಕೆಲವು ತಿಂಗಳುಗಳ ಹಿಂದೆ, ದಿವ್ಯ ಗುರುಗಳ ಸಾಧನೆ ಮತ್ತು ಸಿದ್ಧಿಯ ಲೀಲೆಯನ್ನು ಕುರಿತು ನೂರು ಶ್ಲೋಕಗಳನ್ನು ರಚಿಸುವ ಸಂದರ್ಭ ನನಗೆ ಒದಗಿಬಂತು. ಆ ಶ್ಲೋಕಗಳಲ್ಲಿ 1935ರ ಡಿಸೆಂಬರ್ 5ರಿಂದ 12ರವರೆಗಿನ ಕೇಂದ್ರಬಿಂದುವಾಗಿರುವ ಅಂತಿಮ ಏಳು ದಿನಗಳ ಘಟನೆಗಳಿಗೆ ವಿಶೇಷವಾಗಿ ಒತ್ತು ನೀಡಲಾಗಿದೆ. ಅವುಗಳಲ್ಲಿ ಈವರೆಗೆ ಪ್ರಕಟವಾಗದ ಕೆಲವು ವಿಷಯಗಳೂ ಇವೆ. ಅದರ ಏಕೈಕ ಪ್ರತಿಯನ್ನು ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳಿಗೆ ಸಮರ್ಪಿಸಿದೆ. ಅವರು ಆ ಶ್ಲೋಕಗಳನ್ನು ಅವಲೋಕಿಸಿ, ಕೆಲವನ್ನು ಪರಿಷ್ಕರಿಸಿದರು. ಅವುಗಳನ್ನು ಕಿರುಗ್ರಂಥವಾಗಿ ಪ್ರಕಟಿಸುವಂತೆ ನಿರ್ದೇಶಿಸಿ, ಈ ಪ್ರಕಟಣೆಗೆ ತಮ್ಮ ಹಸ್ತಾಕ್ಷರವನ್ನೊಳಗೊಂಡ ಕೈಬರಹದ ಶ್ರೀಮುಖವನ್ನೂ ಅನುಗ್ರಹಿಸಿದರು. ಅವರ ಪಾದಕಮಲಗಳಲ್ಲಿ ನನ್ನ ಸಾಷ್ಟಾಂಗ ನಮಸ್ಕಾರಗಳು.

(<u>ಸೂಚನೆ</u>: ಈ ಕನ್ನಡ ಅನುವಾದದಲ್ಲಿ ಗ್ರಂಥಕಾರರ 'ನಾನು', 'ನನ್ನ' ಇತ್ಯಾದಿ ಉತ್ತಮ ಪುರುಷ ಪ್ರಯೋಗಗಳು, ಈ ಅನುವಾದಕ್ಕೆ ಮೂಲವಾದ 'ಜಗದ್ಗುರು-ಶ್ರೀಮದಭಿನವ-ವಿದ್ಯಾತೀರ್ಥ-ಮಹಾಸ್ವಾಮಿ-ಸಾಧನ-ಜೀವನ್ಮುಕ್ತ್ಯಾಪ್ತಿ-ಲೀಲಾಶತಕಮ್' ಎಂಬ ಶೀರ್ಷಿಕೆ-ಯೊಂದಿಗೆ 2025ರಲ್ಲಿ 'Centre for Brahmavidya'ದಿಂದ ಪ್ರಕಟಿಸಲ್ಪಟ್ಟ ಆಂಗ್ಲ ಗ್ರಂಥದ ಲೇಖಕರಿಗೆ ಮಾತ್ರ ಅನ್ವಯಿಸುತ್ತವೆ.)

*****

ವಿಷಯಸೂಚಿ

		ಶ್ಲೋಕಗಳು	ಪುಟಗಳು
1	ಮಂಗಳಾಚರಣೆ	1	1
2	(1931ರ ಮೇ 22ರಂದಿನ) ಸಂನ್ಯಾಸದಿಂದ 1935ರ ಡಿಸೆಂಬರ್ 4ರ ವರೆಗಿನ ಸಾಧನೆ	2–5	1–2
3	ಶಿವನ ದರ್ಶನ, ಉಪದೇಶ ಮತ್ತು ಅನುಗ್ರಹ — 1935ರ ಡಿಸೆಂಬರ್ 5	6–26	2–6
4	ಶಾಸ್ತ್ರಾಧಾರಿತ ವಿಚಾರ, ಸವಿಕಲ್ಪ-ಸಮಾಧಿ ಮತ್ತು ನಿರ್ವಿಕಲ್ಪ-ಸಮಾಧಿ — 1935ರ ಡಿಸೆಂಬರ್ 6–11	27–61	6–13
5	ಸಾಕ್ಷಾತ್ಕಾರ ಮತ್ತು ಜೀವನ್ಮುಕ್ತಿಯ ಪ್ರಾಪ್ತಿ — 1935ರ ಡಿಸೆಂಬರ್ 12	62–76	14–16
6	ನಂತರ ಸಂಭವಿಸಿದ ಅಸಾಧಾರಣ ಘಟನೆ — 1935ರ ಡಿಸೆಂಬರ್ 12–15	77–93	16–19
7	ಬ್ರಹ್ಮಸಾಕ್ಷಾತ್ಕಾರದಲ್ಲಿ ಪರ್ಯವಸಾನಗೊಳ್ಳುವ ಸಾಧನೆ — ಮಾನುಷರೂಪದಲ್ಲಿ ಭಗವಂತನ ಕೇವಲ ದಿವ್ಯಲೀಲೆ	94–100	19–21
8	ಅನುಬಂಧ ಅರ್ಥತಃ ನಿರೂಪಿಸಲ್ಪಟ್ಟ ವಾಕ್ಯಗಳು ಮತ್ತು ಶ್ಲೋಕಗಳು		22–24

ಜಗದ್ಗುರು-ಶ್ರೀಮದಭಿನವ-ವಿದ್ಯಾತೀರ್ಥ-ಮಹಾಸ್ವಾಮಿ-ಸಾಧನ-ಜೀವನ್ಮುಕ್ತ್ಯಾಪ್ತಿ-ಲೀಲಾಶತಕಮ್

ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಆಧ್ಯಾತ್ಮಿಕ ಸಾಧನೆಯನ್ನು ಕೈಗೊಂಡು ಜೀವನ್ಮುಕ್ತಿಯನ್ನು ಪಡೆದ ದಿವ್ಯಲೀಲೆಯ ಶತಕ

ಮಂಗಳಾಚರಣೆ

ಧ್ಯಾಯನ್ಪ್ರಣಮ್ಯ ಮತ್ಕೃತ್ಸ್ನವಿದ್ಯಾತೀರ್ಥೇಶಸದ್ಗುರೂನ್ ।
ತಜ್ಜೀವನ್ಮುಕ್ತಿಸಂಪ್ರಾಪ್ತಿಲೀಲಾಂ ವಕ್ಷ್ಯೇ ಯಥಾತಥಮ್ ॥ 1॥

ಸಾಕ್ಷಾತ್ ಪರಮೇಶ್ವರರೂ, ಪ್ರಬುದ್ಧರೂ ಹಾಗೂ ಇತರರಿಗೆ ಸಾಕ್ಷಾತ್ಕಾರವನ್ನು ಅನುಗ್ರಹಿಸುವ ಗುರುಗಳೂ, ನನ್ನ ಸರ್ವಸ್ವರೂ ಆದ ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳಿಗೆ ನನ್ನ ನಮಸ್ಕಾರವನ್ನು ಅರ್ಪಿಸಿ, ಅವರಲ್ಲಿ ನನ್ನ ಮನಸ್ಸನ್ನು ಸ್ಥಿರಗೊಳಿಸಿ, ಅವರು ಜೀವನ್ಮುಕ್ತಿಯನ್ನು (ಜೀವಂತವಾಗಿಯೇ ಸಂಸಾರಬಂಧನದಿಂದ ಮುಕ್ತಿಯನ್ನು) ಹೊಂದಿದ ದಿವ್ಯಲೀಲೆಯನ್ನು ಈಗ ನಾನು ಯಥಾರ್ಥವಾಗಿ ವರ್ಣಿಸುತ್ತೇನೆ.

(1931ರ ಮೇ 22ರಂದಿನ) ಸಂನ್ಯಾಸದಿಂದ 1935ರ ಡಿಸೆಂಬರ್ 4ರ ವರೆಗಿನ ಸಾಧನೆ

ಗುರವೋ ಯತಯೋ ಭೂತ್ವಾ ಸಾರ್ಧಚತುಃಸಮಾನ್ತರೇ ।
ಸ್ವಗುರ್ವೀಶಪ್ರಸಾದೋಪದೇಶೇಭ್ಯಃ ಸ್ವೀಯಶಕ್ತಿತಃ ॥ 2 ॥
ದಕ್ಷಾ ಆಸನಬನ್ಧೇಷು ಪ್ರಾಣಾಯಾಮಕ್ರಿಯಾಸು ಚ ।
ನೃಸಿಂಹಾರ್ಪಿತಚೇತಸ್ಕಾ ನಾದಧ್ಯಾನವಿಶಾರದಾಃ ॥ 3 ॥
ಗಮನಾಸನದೃಷ್ಟ್ಯಾದೌ ಕೃತಾದಿಷ್ಟಾತ್ಮಭಾವನಾಃ ।
ಅಮ್ಬಾಹರೀಶರೂಪೇಷು ಕೃತಧ್ಯಾನಸಮಾಧಯಃ ॥ 4 ॥
ನಾಡೀಚಕ್ರಾದಿಪೂರ್ಣಜ್ಞಾಃ ಕುಣ್ಡಲಿನ್ಯುನ್ನಯೇ ಕ್ಷಮಾಃ ।
ಅಭೂವಂಶ್ಚ ವಿನಾ ವಿಘ್ನಂ ಪೂರ್ವಮೇವ ಯುವಾಶ್ವಿನಾತ್ ॥ 5 ॥

ನನ್ನ ಪರಮಪೂಜ್ಯ ಗುರುಗಳು (1931ರ ಮೇ 22ರಂದು) ಸಂನ್ಯಾಸಿಗಳಾದ ನಾಲ್ಕೂವರೆ ವರ್ಷಗಳೊಳಗೆ ಭಗವಂತನ ಹಾಗೂ ತಮ್ಮ ಗುರುಗಳ (ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ) ಅನುಗ್ರಹ ಮತ್ತು ಮಾರ್ಗದರ್ಶನದಿಂದಲೂ, ತಮ್ಮ ಸ್ವಸಾಮರ್ಥ್ಯದಿಂದಲೂ — (i) ಯೋಗಾಸನಗಳು, ಕ್ರಿಯೆಗಳು, ಬಂಧಗಳು ಮತ್ತು

ಪ್ರಾಣಾಯಾಮಗಳಲ್ಲಿ ಪರಿಣತಿಯನ್ನು ಪಡೆದರು; (ii) ಪ್ರಭು ನೃಸಿಂಹನಲ್ಲಿ ಗಾಢವಾದ ಭಕ್ತಿಯನ್ನು ಮೈಗೂಡಿಸಿಕೊಂಡರು; (iii) ಆಂತರಿಕ ನಾದವನ್ನು ಕುರಿತ ಧ್ಯಾನದಲ್ಲಿ ಪಾರಂಗತರಾದರು; (iv) ನಡೆಯುವಾಗ, ಕುಳಿತಿರುವಾಗ, ಇಂದ್ರಿಯ-ವಿಷಯಗಳನ್ನು ಗ್ರಹಿಸುವಾಗ ಮತ್ತು ನಿದ್ರೆಗೆ ಹೋಗುವಾಗ ಯಾವ ರೀತಿಯಲ್ಲಿ ಆತ್ಮಾನುಸಂಧಾನವನ್ನು ಮಾಡಬೇಕೆಂದು ಅವರಿಗೆ ತಿಳಿಸಲಾಯಿತೋ, ಆ ರೀತಿಯಲ್ಲಿ ಆತ್ಮಾನುಸಂಧಾನದ ಸಾಧನೆಯಲ್ಲಿ ಸಫಲರಾದರು [ಅಂದರೆ, ನಡೆಯುವಾಗ 'ತಾನು ಆತ್ಮವೆಂಬ ಸಾಗರದಲ್ಲಿ ಒಂದು ಅಲೆ' ಎಂದು, ಕುಳಿತಿರುವಾಗ 'ತಾನು ಚೈತನ್ಯದ ದಾರದಲ್ಲಿ ಪೋಣಿಸಲ್ಪಟ್ಟ ಒಂದು ಮಣಿ' ಎಂದು, ಇಂದ್ರಿಯ-ವಿಷಯಗಳನ್ನು ಗ್ರಹಿಸುವಾಗ 'ಆತ್ಮವು ಪ್ರಕಟವಾಗಿದೆ' ಎಂದು, ಹಾಗೂ ನಿದ್ರೆಗೆ ಜಾರುವಾಗ 'ತಾನು ಆತ್ಮಾನಂದ ಸಾಗರದಲ್ಲಿ ಮುಳುಗಿದ್ದೇನೆ' ಎಂದು ಚಿಂತಿಸುವುದರಲ್ಲಿ ಯಶಸ್ಸನ್ನು ಗಳಿಸಿಕೊಂಡರು]; (v) ದೇವಿ, ಹರಿ ಮತ್ತು ಶಿವನ ರೂಪಗಳ ಮೇಲೆ ಧ್ಯಾನ ಹಾಗೂ ಸಮಾಧಿಯಲ್ಲಿ ಸಿದ್ಧಿಯನ್ನು ಪಡೆದರು; (vi) ವಿವಿಧ ನಾಡಿಗಳ ಮತ್ತು ಚಕ್ರಗಳ ಬಗ್ಗೆ ಸಂಪೂರ್ಣ ಪರಿಚಯವನ್ನು ಹೊಂದಿದರು; ಮತ್ತು (vii) ಕುಂಡಲಿನಿಯನ್ನು (ಶಿರಸ್ಸಿನ ವರೆಗೆ) ಏರಿಸುವ ಸಾಧನೆಯಲ್ಲಿ ಪಾರಂಗತರಾದರು. ಇವೆಲ್ಲವೂ ಯಾವುದೇ ಅಡೆತಡೆಯಿಲ್ಲದೆ ಯುವ-ಸಂವತ್ಸರದ ಆಶ್ವಯುಜ ಮಾಸ ಪ್ರಾರಂಭವಾಗುವುದಕ್ಕೆ ಮುನ್ನವೇ (ಅಂದರೆ, 1935ರ ಸೆಪ್ಟೆಂಬರ್ 28ಕ್ಕೂ ಮುನ್ನವೇ) ಸಿದ್ಧಿಸಿದವು.

<u>ಶಿವನ ದರ್ಶನ, ಉಪದೇಶ ಮತ್ತು ಅನುಗ್ರಹ — 1935ರ ಡಿಸೆಂಬರ್ 5</u>

ಯುವವರ್ಷೇ ಸಹಶ್ಯುಕ್ಲದಶಮ್ಯಾಂ ಗುರವೋ ಮಮ ।
ಉಪೇತ್ಯ ಸ್ವಗುರೂನ್ಸಾಯಂ ಸಾಷ್ಟಾಙ್ಗಂ ತಾನನಂಸಿಷುಃ ॥ 6 ॥

ಯುವ-ಸಂವತ್ಸರದ ಮಾರ್ಗಶೀರ್ಷ ಶುಕ್ಲ ದಶಮಿಯಂದು (ಅಂದರೆ, 1935ರ ಡಿಸೆಂಬರ್ 5ರಂದು) ಸಂಜೆ ನನ್ನ ಪರಮಪೂಜ್ಯ ಗುರುಗಳು (ತಮ್ಮನ್ನು ಕರೆಸಿಕೊಂಡಿದ್ದ) ತಮ್ಮ ಗುರುಗಳ ಬಳಿಗೆ ತೆರಳಿ ಅವರಿಗೆ ಸಾಷ್ಟಾಂಗ ನಮಸ್ಕರಿಸಿದರು.

ಶಿಷ್ಯ ಶೀರ್ಷೇ ಕರೌ ನ್ಯಸ್ಯ ತ್ರಿಸ್ತೇ ಪಞ್ಚಾಕ್ಷರೀಂ ಜಗುಃ ।
ಪ್ರಾಪ್ಯಾಪೂರ್ವಾಶಿಷಂ ಧ್ಯಾತುಂ ಗುರವೋದ್ರಿಂ ಪ್ರತಸ್ಥಿರೇ ॥ 7 ॥

ಅವರ ಗುರುಗಳು ತಮ್ಮ ಎರಡೂ ಹಸ್ತಗಳನ್ನು ಅವರ ತಲೆಯ ಮೇಲಿರಿಸಿ, ಶಿವಪಂಚಾಕ್ಷರೀ (ಓಂ ನಮಃ ಶಿವಾಯ) ಮಂತ್ರವನ್ನು ಮೂರು ಬಾರಿ ಉಚ್ಚರಿಸಿದರು. ಈ ವಿಶೇಷ ಅನುಗ್ರಹವನ್ನು ಮೊದಲ ಬಾರಿಗೆ ಪಡೆದ ಬಳಿಕ, ಗುರುಗಳು ಧ್ಯಾನಕ್ಕಾಗಿ ಕಾಲ್ನಡಿಗೆಯಿಂದ ತಲುಪಬಹುದಾದಷ್ಟು ದೂರದಲ್ಲಿದ್ದ ಒಂದು ಬೆಟ್ಟದ ಕಡೆಗೆ ಹೊರಟರು. (ಆ ಬೆಟ್ಟದಿಂದ ಪಶ್ಚಿಮ ದಿಕ್ಕಿನಲ್ಲಿ ಶೃಂಗೇರಿಯ ಮಲಹಾನಿಕರೇಶ್ವರ ದೇವಾಲಯವನ್ನು ನೇರವಾಗಿ ಕಾಣಬಹುದಾಗಿತ್ತು.)

ರವ್ಯಸ್ತಾತ್ಸಾರ್ಧಘಣ್ಟಾಯಾಃ ಪ್ರಾಗ್ಗಿರೇಸಾನುಮಾಪ್ನವನ್ ।
ಯತ್ಸರ್ವಂ ತತ್ರತೋ ದೃಷ್ಟಂ ತಸ್ಯ ಮತ್ತೇಶರೂಪತಾಮ್ ॥ 8 ॥
ಭೂರಮ್ಭಾಂಸ್ಯನಲೋ ವಾಯುಃ ಖಮರ್ಕಶ್ಚನ್ದ್ರಮಾಃ ಪುಮಾನ್ ।
ಇತಿ ಮೂರ್ತ್ಯಷ್ಟಕಂ ಯಸ್ಯ ಭಾತಿ ಸ್ಥಾವರಜಙ್ಗಮಮ್ ॥ 9 ॥
ಪರಾಯ ಗುರವೇ ತಸ್ಮೈ ದಕ್ಷಿಣಾಮೂರ್ತಯೇ ನಮಃ ।
ಇತ್ಯೇತದರ್ಥಕಂ ಪದ್ಯಂ ಸಭಾವನಮುದ್ಗಿರಯನ್ ॥ 10 ॥

(ಆ ಸಂಜೆಯ 6 ಗಂಟೆಯ) ಸೂರ್ಯಾಸ್ತಕ್ಕೆ ಒಂದೂವರೆ ಗಂಟೆ ಮುನ್ನ ಅವರು ಆ ಬೆಟ್ಟದ ಶಿಖರವನ್ನು ತಲುಪಿದರು. ಅಲ್ಲಿ ದೃಶ್ಯವಾಗಿದ್ದ ಸಕಲವನ್ನೂ ಪರಬ್ರಹ್ಮಸ್ವರೂಪವೆಂದು ಭಾವಿಸಿ, (ಶಂಕರಭಗವತ್ಪಾದರ ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಒಂಬತ್ತನೆಯ) ಶ್ಲೋಕದ ತಾತ್ಪರ್ಯದಲ್ಲಿ ಮನಸ್ಸನ್ನು ಏಕಾಗ್ರಗೊಳಿಸಿ ಅವರು ಅದನ್ನು ಉಚ್ಚರಿಸಿದರು. ಆ ಶ್ಲೋಕದ ತಾತ್ಪರ್ಯ ಹೀಗಿದೆ: “ಪೃಥಿವೀ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಜೀವ — ಸಕಲ ಚರಾಚರಾತ್ಮಕವಾದುದು ಯಾರ ಈ ಎಂಟು ರೂಪಗಳೋ, ಆ ಪರಮಾತ್ಮ, ಗುರು, ಭಗವಂತ ದಕ್ಷಿಣಾಮೂರ್ತಿಗೆ ನಮಸ್ಕಾರ.”

ಸಿದ್ಧಾಸನೇ ತ ಆಸಿತ್ವಾ ಗುರೂನ್ನೇಮುಸ್ತಥೇಶ್ವರಮ್ ।
ನಿದಧಾನಾ ಭ್ರುವೋರ್ಮಧ್ಯೇ ತತೋಽರ್ಧೋನ್ಮೀಲಿತೇಕ್ಷಣೇ ॥ 11 ॥
ಶಿವಪಞ್ಚಾಕ್ಷರೀಮನ್ತ್ರಂ ಜಪನ್ತೋ ಮನಸಾ ಪ್ರಭಾಮ್ ।
ತತ್ರಾದ್ರಾಕ್ಷುಃ ಶಶಾಙ್ಕಾಭಾಂ ತದನು ಧ್ಯಾತುಮೀಶ್ವರಮ್ ॥ 12 ॥
ಪರಶ್ವಭಯಸನ್ಮುದ್ರಾಕೃಪಾಣವಜ್ರಶೂಲಿನಮ್ ।
ಪ್ರಲಯಾನಲಘಣ್ಟಾಹಿವಾಗುರಾಙ್ಕುಶಪಾಣಿನಮ್ ॥ 13 ॥
ಸಾಮ್ಬಸದಾಶಿವಂ ತ್ರ್ಯಕ್ಷಂ ಪಞ್ಚಾಸ್ಯದಶದೋರ್ಯುತಮ್ ।
ಬಹುಧಾಲಙ್ಕೃತಂ ಶಾನ್ತಂ ಸ್ಫಟಿಕಾಭೇನ್ದುಧಾರಿಣಮ್ ॥ 14 ॥
ರಕ್ತಾಷ್ಟದಲಹೃತ್ಪದ್ಮೇ ಪ್ರಕಲ್ಪ್ಯೈವಂ ಸದಾಶಿವಮ್ ।
ಏಕೈಕಶಃ ಶಿವಾಸ್ಯಾನಿ ಕೇಂದ್ರೀಕೃತ್ಯ ಲುಲೋಕಿರೇ ॥ 15 ॥

ನಂತರ ಅವರು ಸಿದ್ಧಾಸನದಲ್ಲಿ ಕುಳಿತು, ಮನಸ್ಸಿನಲ್ಲಿ ತಮ್ಮ ಗುರುಗಳನ್ನೂ ಶಿವನನ್ನೂ ನಮಸ್ಕರಿಸಿದರು. ಕಣ್ಣುಗಳನ್ನು ಅರೆಮುಚ್ಚಿಕೊಂಡು, ದೃಷ್ಟಿಯನ್ನು ಭ್ರೂಮಧ್ಯದ ಕಡೆಗೆ ಇರಿಸಿ, ಮನಸ್ಸಿನಲ್ಲಿಯೇ ಶಿವಪಂಚಾಕ್ಷರೀ (ಓಂ ನಮಃ ಶಿವಾಯ) ಮಂತ್ರವನ್ನು ಜಪಿಸಿದರು. ಹೀಗೆ ಮಾಡುತ್ತಿದ್ದಂತೆ, ತಮ್ಮ ಭ್ರೂಮಧ್ಯದಲ್ಲಿ ಚಂದ್ರಪ್ರಕಾಶಕ್ಕೆ ಸಮಾನವಾದ ಪ್ರಭೆಯ ವೃತ್ತಾಕಾರ ಮಂಡಲವೊಂದನ್ನು ಅನುಭವಿಸಿದರು. ಅನಂತರ ಶಿವನನ್ನು ಕುರಿತು ಧ್ಯಾನಿಸಲು (ಶಿವಪಂಚಾಕ್ಷರೀ ಮಂತ್ರದ ಧ್ಯಾನಶ್ಲೋಕಕ್ಕೆ ಅನುಸಾರವಾಗಿ) ತಮ್ಮ ಹೃದಯದಲ್ಲಿ

ಸ್ಫಟಿಕಮಣಿಯಂತೆ ಕಾಂತಿಯುಳ್ಳ, ಅಷ್ಟದಳದ ಕೆಂಪು ಕಮಲದಲ್ಲಿ ಪಾರ್ವತೀ ಸಮೇತನಾಗಿ ಆಸೀನನಾದ, ಮೂರು ಕಣ್ಣುಗಳಿಂದ ಕೂಡಿದ ಐದು ಮುಖಗಳನ್ನು (ನಾಲ್ಕು ದಿಕ್ಕುಗಳಿಗೆ ನಾಲ್ಕು ಮುಖಗಳನ್ನೂ, ಮೇಲ್ಮುಖವಾಗಿ ಒಂದನ್ನು) ಉಳ್ಳ, ತನ್ನ ಬಲಭಾಗದ ಐದು ಕೈಗಳಲ್ಲಿ ತ್ರಿಶೂಲ, ವಜ್ರಾಯುಧ, ಖಡ್ಗ, ಪರಶು ಮತ್ತು ಅಭಯಮುದ್ರೆಯನ್ನು, ಎಡಭಾಗದ ಐದರಲ್ಲಿ ಸರ್ಪ, ಪಾಶ, ಘಂಟೆ, ಪ್ರಳಯಾಗ್ನಿ ಮತ್ತು ಅಂಕುಶಗಳನ್ನು ಹಿಡಿದ — ಹೀಗೆ ಹತ್ತು ಕೈಗಳಿಂದ ಕೂಡಿದ, ಶಿರಸ್ಸಿನಲ್ಲಿ ಚಂದ್ರನನ್ನು ಧರಿಸಿರುವ, ವಿವಿಧ ಆಭರಣಗಳಿಂದ ಅಲಂಕೃತನಾದ, ಹಾಗೂ ಶಾಂತನಾದ ಸದಾಶಿವನನ್ನು ಮನಸ್ಸಿನಲ್ಲಿ ರೂಪಿಸಿಕೊಂಡರು. ಶಿವನನ್ನು ಹೀಗೆ ಸ್ಪಷ್ಟವಾಗಿ ಭಾವಿಸಿಕೊಂಡ ಬಳಿಕ, ಒಂದೊಂದಾಗಿ ಶಿವನ ಐದು ಮುಖಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿ ಅವುಗಳನ್ನು ಸ್ಪಷ್ಟವಾಗಿ ರೂಪಿಸಿಕೊಂಡರು.

ಏಕೈಕಂ ಸುನ್ದರಂ ವಕ್ತ್ರಂ ದ್ವಿತ್ರನಿಮೇಶಮೀಕ್ಷಿತಮ್।
ತಾನಾಕರ್ಷತ್ತದೈಶಾನಮೂರ್ಧ್ವಾಸ್ಯಂ ತು ವಿಶೇಷತಃ ॥ 16 ॥

ಪ್ರತಿಯೊಂದು ಸುಂದರವಾದ ಮುಖದ ಮೇಲೂ ಒಂದೆರಡು ನಿಮಿಷಗಳ ಕಾಲ ದೃಷ್ಟಿಯನ್ನು ಸ್ಥಿರಗೊಳಿಸಿದರು. ಪ್ರತಿಯೊಂದು ಮುಖವೂ ಅವರಿಗೆ ಆನಂದವನ್ನುಂಟುಮಾಡಿದರೂ, ಮೇಲ್ಮುಖವು (ಶಿವನ ಈಶಾನಮುಖವು) ಅವರನ್ನು ವಿಶೇಷವಾಗಿ ಆಕರ್ಷಿಸಿತು.

ಪೂರ್ಣರೂಪೇ ತತೋ ಧ್ಯಾತೇ ಜಪೇ ಚೋಪರತಿಂ ಗತೇ।
ಭೇಜುಃ ಪ್ರತ್ಯಕ್ಷವಚ್ಛಮ್ಭುಂ ಸಮಾಧೌ ಸವಿಕಲ್ಪಕೇ ॥ 17 ॥

ನಂತರ ಪೂರ್ಣ ರೂಪದಲ್ಲಿ ಮನಸ್ಸನ್ನು ಕೇಂದ್ರೀಕರಿಸಿದರು. ಬಳಿಕ, ಅವರ ಶಿವಪಂಚಾಕ್ಷರೀ ಮಂತ್ರದ ಮಾನಸಿಕ ಜಪವು ಕ್ರಮೇಣ ಮಸುಕಾಯಿತು. ಆಗ ಸಿದ್ಧಿಸಿದ ಸವಿಕಲ್ಪ-ಸಮಾಧಿಯಲ್ಲಿ, ಒಂದು ವಸ್ತುವನ್ನು ಪ್ರತ್ಯಕ್ಷವಾಗಿ ಕಾಣುವಷ್ಟೇ ಅನಾಯಾಸವಾಗಿ ಮತ್ತು ಸ್ಪಷ್ಟವಾಗಿ ಅವರು ಭಗವಂತನನ್ನು ಸಾಕ್ಷಾತ್ಕರಿಸಿಕೊಂಡರು.

ವ್ಯುತ್ಥಾನೇಽಶ್ರೌಷುರೋಙ್ಕಾರಧ್ವನಿಂ ದದೃಶುರೀಶ್ವರಮ್।
ಹೃತ್ಪದ್ಮಾದ್ಬಹಿರಾಯಾನ್ತಂ ವರ್ಧಮಾನಂ ಪುರಃ ಸ್ಥಿತಮ್ ॥ 18 ॥
ದ್ವಿಭುಜಂ ತರ್ಹ್ಯಪಶ್ಯಂಸ್ತಂ ಭಸ್ಮಾಹಿಮಾತ್ರಭೂಷಿತಮ್।
ತೇಷಾಂ ಮೂರ್ಧ್ನಿ ಕರಂ ನ್ಯಸ್ಯ ಪ್ರಾಹೇಶೋ ದಿವ್ಯಯಾ ಗಿರಾ ॥ 19 ॥

ಸವಿಕಲ್ಪ-ಸಮಾಧಿಯಿಂದ ಅವರ ಮನಸ್ಸು ಹೊರಬಂದಾಗ, ಅವರಿಗೆ 'ಓಂ' ನಾದವು ಕೇಳಿಬಂತು; ತಮ್ಮ ಹೃದಯಕಮಲದಿಂದ ಹೊರಹೊಮ್ಮಿ ಕ್ರಮೇಣ ವಿಸ್ತರಿಸುತ್ತಾ ತಮ್ಮ ಮುಂದೆ ತಮಗಭಿಮುಖವಾಗಿ ಪ್ರಕಟಗೊಂಡ ಭಗವಂತನನ್ನು ಕಂಡರು. (ಹತ್ತು ಕೈಗಳು, ಐದು ಮುಖಗಳು ಮತ್ತು ವಿವಿಧ ಆಭರಣಗಳಿಂದ ಕೂಡಿದ್ದ) ಭಗವಂತನ ರೂಪವು

ಬದಲಾಗಿ, ಎರಡು ಕೈಗಳನ್ನು (ಮತ್ತು ಒಂದು ಮುಖವನ್ನು) ಹೊಂದಿದ್ದ, ಕೇವಲ ಭಸ್ಮ ಮತ್ತು ಸರ್ಪದಿಂದ ಅಲಂಕೃತನಾದ ಶಿವನನ್ನು ಕಂಡರು. ಭಗವಂತನು ನನ್ನ ಪರಮಪೂಜ್ಯ ಗುರುಗಳ ಶಿರಸ್ಸಿನ ಮೇಲೆ ತನ್ನ ಕರವನ್ನಿಟ್ಟು, ದಿವ್ಯಸ್ವರದಲ್ಲಿ ಹೀಗೆಂದು ನುಡಿದನು:

'ಶ್ವಃಪ್ರಭೃತಿ ನಿರಾಕಾರೇ ಪರೇ ತತ್ತ್ವೇಽತ್ರ ಮಾನಸಮ್।
ಸಮಾಧತ್ಸ್ವಾಚಿರಾದ್ವತ್ಸ ಬ್ರಹ್ಮಸಂಸ್ಥೋ ಭವಿಷ್ಯಸಿ' ॥ 20 ॥
ಉಕ್ತ್ವಾ ತಿರೋದಧೇ ಶಮ್ಭುರಸ್ತಮೈಚ್ಛದಿವಾಕರಃ।
ತುಷ್ಟುವುಃ ಪರಮಾತ್ಮಾನಂ ಭಕ್ತ್ಯಾ ತೇ ಹರ್ಷನಿರ್ಭರಾಃ ॥ 21 ॥

'ಪ್ರಿಯ ಬಾಲಕನೇ, ನಾಳೆಯಿಂದ ಇಲ್ಲಿ ನಿರಾಕಾರ (ಅದ್ವೈತ) ಪರತತ್ತ್ವದಲ್ಲಿ ನಿನ್ನ ಮನಸ್ಸನ್ನು ನೆಲೆಗೊಳಿಸು. ನೀನು ಶೀಘ್ರದಲ್ಲೇ ಪರಬ್ರಹ್ಮದಲ್ಲಿ ಅಚಲವಾಗಿ ನೆಲೆನಿಲ್ಲುವೆ.' ಈ ಮಾತನ್ನು ಹೇಳಿ, ಭಗವಂತನು ಅಂತರ್ಧಾನನಾದನು. ಸೂರ್ಯನು ಅಸ್ತಂಗತನಾದನು. ಆನಂದ-ಭರಿತರಾಗಿ ನನ್ನ ಪರಮಪೂಜ್ಯ ಗುರುಗಳು ಭಕ್ತಿಯಿಂದ ಭಗವಂತನನ್ನು ಸ್ತುತಿಸಿದರು.

ದಶಪದ್ಯಃ ಸ್ವತಃಸ್ಫೂರ್ತ್ಯೈಃ ಭುಜಙ್ಗವೃತ್ತಸಙ್ಗತೈಃ।
ತತೋ ವಟದ್ರುಮೂಲಸ್ಥದಿವ್ಯಾದ್ಯಗುರುರೂಪಿಣಮ್ ॥ 22 ॥
ಶ್ರೀಮೇಧಾದಕ್ಷಿಣಾಮೂರ್ತಿಂ ಚನ್ದ್ರಚೂಡಾಹಿಶೃಙ್ಗಲಮ್।
ಧೃತಾಕ್ಷಸೂತ್ರಚಿನ್ಮುದ್ರಾಸುಧಾಕಲಶಪುಸ್ತಕಮ್ ॥ 23 ॥
ವಿವಿಧಾಭರಣಂ ತ್ರ್ಯಕ್ಷಂ ಸ್ಫಟಿಕರೂಪ್ಯವರ್ಣಕಮ್।
ನಿಧಾಯ ಹೃದಯೇ ಭಕ್ತ್ಯಾ ಸಮಾಧಿಂ ಸದ್ಯ ಆಪ್ನವನ್ ॥ 24 ॥

ಸ್ವಯಂಸ್ಫೂರ್ತಿಯಿಂದ ರಚಿಸಿದ ಭುಜಂಗಪ್ರಯಾತ ಛಂದಸ್ಸಿನ (ಸಂಸ್ಕೃತದ) ಹತ್ತು ಶ್ಲೋಕಗಳ ಮೂಲಕ ಭಗವಂತನನ್ನು ಸ್ತುತಿಸಿದರು. (ಶಿವನು ಗುರುಸ್ವರೂಪನಾಗಿ ತಮಗೆ ಉಪದೇಶಿಸಿದ್ದನ್ನು ಮನಗಂಡು) ಅನಂತರ ಆಲದ ಮರದ ಅಡಿಯಲ್ಲಿ ಆಸೀನನಾದ ದಿವ್ಯ ಆದಿಗುರು ಮೇಧಾದಕ್ಷಿಣಾಮೂರ್ತಿಯ ರೂಪದಲ್ಲಿ ಭಗವಂತನನ್ನು ತಮ್ಮ ಹೃದಯದಲ್ಲಿ ಭಾವಿಸಿಕೊಂಡರು. (ಮೇಧಾದಕ್ಷಿಣಾಮೂರ್ತಿ ಮಂತ್ರದ ಧ್ಯಾನಶ್ಲೋಕಕ್ಕೆ ನಿಖರವಾಗಿ ಒಪ್ಪುವಂತೆ) ಸ್ಫಟಿಕದಂತೆ ಬೆಳ್ಳಿಯ ಕಾಂತಿಯನ್ನು ಹೊಂದಿರುವ, ಶಿರಸ್ಸಿನಲ್ಲಿ ಚಂದ್ರನನ್ನು ಹಾಗೂ ಮೇಖಲೆಯಾಗಿ ಸರ್ಪವನ್ನು ಧರಿಸಿರುವ, ವಿವಿಧ ಆಭರಣಗಳಿಂದ ಅಲಂಕೃತನಾದ, ನಾಲ್ಕು ಕೈಗಳುಳ್ಳ — ಎರಡು ಬಲಗೈಗಳಲ್ಲಿ ಜಪಮಾಲೆ ಮತ್ತು (ತೋರುಬೆರಳು ಮತ್ತು ಹೆಬ್ಬೆರಳಿನ ತುದಿಗಳು ಪರಸ್ಪರ ಸ್ಪರ್ಶಿಸುತ್ತ, ಉಳಿದ ಬೆರಳುಗಳನ್ನು ನೇರವಾಗಿ ಮೇಲ್ಮುಖವಾಗಿ ಇರಿಸಿಕೊಳ್ಳುವ) ಚಿನ್ಮುದ್ರೆ ಹಾಗೂ ಎಡಭಾಗದ ಎರಡು ಕೈಗಳಲ್ಲಿ ಅಮೃತಕಲಶ ಮತ್ತು ಗ್ರಂಥವನ್ನು ಧರಿಸಿರುವ — ಪರಮಾತ್ಮನನ್ನು ಅವರು ಮನಸ್ಸಿನಲ್ಲಿ

ಧ್ಯಾನಿಸಿದರು. ಆ ರೂಪದ ಮೇಲಿನ ಅವರ ಏಕಾಗ್ರತೆ ತಕ್ಷಣವೇ ಸಮಾಧಿಯ ರೂಪದಲ್ಲಿ ಪರಿಪಕ್ವವಾಯಿತು.

ವ್ಯುತ್ಥಾನೇ ಬುಬುಧುಃ ಕಣ್ಠೇ ಭುಜಬ್ಗಂ ಹಾರವತ್ಸ್ಥಿತಮ್।
ತಮಹಿಂ ಲಾಲಯಾಮಾಸುಸ್ತತಃ ಸೋಽಪಗಮಾಚ್ಛನೈಃ ॥ 25 ॥

ಸಮಾಧಿಯಿಂದ ಬಹಿರ್ಮುಖರಾದಾಗ, ತಮ್ಮ ಕುತ್ತಿಗೆಯ ಸುತ್ತಲೂ ಒಂದು ನಾಗರ ಹಾವು ಹಾರದಂತೆ ಸುತ್ತಿಕೊಂಡಿರುವುದರ ಅರಿವು ಅವರಿಗುಂಟಾಯಿತು. ಅದನ್ನು ಮೃದುವಾಗಿ ಸವರಿದರು. ಸ್ವಲ್ಪ ಸಮಯದ ಬಳಿಕ ಅದು ನಿಧಾನವಾಗಿ ಅಲ್ಲಿಂದ ಹರಿದುಹೋಯಿತು.

ಕೃಷ್ಣಪಕ್ಷೇ ದ್ವಿತೀಯಾಯಾಮೀಶಾಶೀಃ ಸಫಲಾऽಭವತ್।
ಸಾಕ್ಷಾತ್ಕೃತ್ಯ ಯದಾ ಬ್ರಹ್ಮ ಜೀವನ್ಮುಕ್ತಾ ಹಿ ತೇऽಭವನ್ ॥ 26 ॥

ಮುಂದಿನ ಕೃಷ್ಣ ದ್ವಿತೀಯೆಯಂದು (ಒಂದು ವಾರದ ಬಳಿಕ, 1935ರ ಡಿಸೆಂಬರ್ 12ರಂದು, ಅದ್ವಯ) ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿ ಜೀವನ್ಮುಕ್ತರು (ಜೀವಂತವಾಗಿರುವಾಗಲೇ ಸಂಸಾರದಿಂದ ಮುಕ್ತರು) ಆದುದರೊಂದಿಗೆ, ಭಗವಂತನು ನೀಡಿದ್ದ (ಶೀಘ್ರದಲ್ಲೇ ಅವರು ಪರಬ್ರಹ್ಮದಲ್ಲಿ ಅಚಲವಾಗಿ ನೆಲೆನಿಲ್ಲುವರೆಂಬ) ಅನುಗ್ರಹವು ಫಲಿಸಿತು.

ಶಾಸ್ತ್ರಾಧಾರಿತ ವಿಚಾರ, ಸವಿಕಲ್ಪ-ಸಮಾಧಿ ಮತ್ತು ನಿರ್ವಿಕಲ್ಪ-ಸಮಾಧಿ — 1935ರ ಡಿಸೆಂಬರ್ 6–11

ಪರೇದ್ಯುಃ ಸಾಯಮಾಸಿತ್ವಾ ಗಿರೌ ತತ್ತ್ವವಿಮರ್ಶನಮ್।
ವೇದಾನ್ತಶಾಸ್ತ್ರಮಾಶ್ರಿತ್ಯ ಚಕ್ರುಸ್ತದಿಹ ವರ್ಣ್ಯತೇ ॥ 27 ॥

ಭಗವಂತನ ಅನುಗ್ರಹ ದೊರೆತ ಮರುದಿನ (1935ರ ಡಿಸೆಂಬರ್ 6ರಂದು) ಸಂಜೆ ಬೆಟ್ಟದ ಶಿಖರವನ್ನು ತಲುಪಿದ ಬಳಿಕ, ಅವರು ವೇದಾಂತಶಾಸ್ತ್ರದ ಆಧಾರದ ಮೇಲೆ ಪರಮತತ್ತ್ವದ ಕುರಿತ ಗಾಢ ವಿಚಾರದಲ್ಲಿ ತೊಡಗಿದರು. ಅವರ ಆ ವಿಚಾರವನ್ನು ಕೆಳಗಿನ ಶ್ಲೋಕಗಳಲ್ಲಿ ವಿವರಿಸಲಾಗಿದೆ.

ಬ್ರಹ್ಮವಿತ್ಪರಮಾಪ್ನೋತಿ ಬ್ರಹ್ಮಾನನ್ದವಿದೋ ನ ಭೀಃ।
ಭೀರ್ಭವೇದ್ಧಿ ಯದಾ ಭೇದಂ ತಸ್ಮಿನ್ನೀಷದಪೀಕ್ಷತೇ ॥ 28 ॥
ಶ್ರುತ್ಯುಕ್ತ್ಯಾ ಭೇದಧೀರ್ಗರ್ಹ್ಯಾ ಬ್ರಹ್ಮಜ್ಞಾನಾದ್ಧಿ ಬ್ರಹ್ಮತಾ।
ಅಬ್ರಹ್ಮತ್ವಸ್ಯ ಸತ್ಯತ್ವೇ ವಿದ್ಯಯಾ ಬ್ರಹ್ಮತಾ ಕಥಮ್ ॥ 29 ॥
ಅವಿದ್ಯಾಮೇವ ಸರ್ವತ್ರ ವಿದ್ಯಾ ವೈ ವಿನಿವರ್ತಯೇತ್।
ನ ವಿದ್ಯಾ ವಸ್ತುಧರ್ಮಸ್ಯ ಕರ್ತ್ರ್ಯಪೋದ್ರೀ ಚ ಕುತ್ರಚಿತ್ ॥ 30 ॥

ವ್ಯಜ್ಯತೇ ಸೈವ ಬೋಧಾದ್ಯಾ ಬ್ರಹ್ಮತಾऽಜ್ಞಾನಸಂವೃತಾ ।
ಅತೋ ಬ್ರಹ್ಮಾಸ್ಮ್ಯಸಂಸಾರೀ ಭೇದೋ ಮಿಥ್ಯಾ ಹ್ಯಸಂಶಯಮ್ ॥ 31 ॥

'ಬ್ರಹ್ಮವನ್ನು ಅರಿತವನು ಪರಮವಸ್ತುವನ್ನು ಪಡೆಯುತ್ತಾನೆ (ತೈತ್ತಿರೀಯ-ಉಪನಿಷತ್ 2.1.1)'; 'ಆನಂದವೇ ಆದ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಂಡವನು ಸದಾ ಭಯಮುಕ್ತನಾಗಿರುತ್ತಾನೆ (ತೈತ್ತಿರೀಯ-ಉಪನಿಷತ್ 2.4.1)'; 'ಅದರಲ್ಲಿ ಅಲ್ಪಮಾತ್ರವಾದರೂ ಭೇದವನ್ನು ಕಂಡಾಗ ಭಯಕ್ಕೆ ತುತ್ತಾಗುತ್ತಾನೆ (ತೈತ್ತಿರೀಯ-ಉಪನಿಷತ್ 2.7.1)'. ಬ್ರಹ್ಮಜ್ಞಾನದಿಂದ ತನ್ನ ಬ್ರಹ್ಮತ್ವವು ಸಿದ್ಧಿಸುತ್ತದೆ ಮತ್ತು ಯಾವುದೇ ಭೇದದ ಕಲ್ಪನೆಯು ನಿಂದಿತವಾಗಿದೆ ಎಂಬುದು ಶ್ರುತಿವಾಕ್ಯಗಳಿಂದ ಸ್ಪಷ್ಟವಾಗಿದೆ. ವಾಸ್ತವವಾಗಿ ತಾನು ಬ್ರಹ್ಮಕ್ಕಿಂತ ಭಿನ್ನನಾಗಿದ್ದರೆ, ಜ್ಞಾನದಿಂದ ಅವನು ಬ್ರಹ್ಮವಾಗುವುದು ಅಸಂಭವ. ಏಕೆಂದರೆ, ಜ್ಞಾನವು ಎಲ್ಲಿಯೂ ವಸ್ತುವೊಂದರ ಅಜ್ಞಾನವನ್ನು ಮಾತ್ರ ನಿವಾರಿಸುತ್ತದೆ; ಯಾವುದೇ ವಸ್ತುವಿನ ವಾಸ್ತವಿಕ ಧರ್ಮವನ್ನು ಅದು ಉಂಟುಮಾಡುವುದೂ ಇಲ್ಲ, ನಿವಾರಿಸುವುದೂ ಇಲ್ಲ. ಆದ್ದರಿಂದ, ಬ್ರಹ್ಮಜ್ಞಾನವು ಏನನ್ನು ಮಾಡಬಲ್ಲುದೆಂದರೆ, ಅಜ್ಞಾನದಿಂದ ಮರೆಯಾದ ತನ್ನ ಸ್ವಾಭಾವಿಕ ಬ್ರಹ್ಮಸ್ವರೂಪವನ್ನು ಪ್ರಕಟಿಸುವುದು ಮಾತ್ರ. ಹೀಗಾಗಿ, ನಾನು ಎಂದೆಂದಿಗೂ ಬ್ರಹ್ಮವೇ, ಸಂಸಾರದಿಂದ ಮುಕ್ತನೇ ಮತ್ತು ನನಗೂ ಬ್ರಹ್ಮಕ್ಕೂ ಯಾವುದೇ ಭೇದವು ನಿಶ್ಚಯವಾಗಿಯೂ ಮಿಥ್ಯೆಯೇ ಎಂಬುದು ಶಾಸ್ತ್ರೋಪದೇಶದಿಂದ ಸಿದ್ಧವಾಗುತ್ತದೆ.

ದೇಹಸ್ತ್ವಗಾದಿಸಙ್ಘಾತೋ ದೃಶ್ಯಶ್ಚಾನ್ನಮಯೋ ಜಡಃ ।
ಅಜಡತ್ವಾಚ್ಚ ತಜ್ಜ್ಞತ್ವಾನ್ನಾಹಂ ದೇಹೋ ವಿನಶ್ವರಃ ॥ 32 ॥

ದೇಹವು ಚರ್ಮ, ಮಾಂಸ, ಎಲುಬು ಮುಂತಾದವುಗಳ ಸಮೂಹವಾಗಿದೆ; ಸೇವಿಸಲ್ಪಡುವ ಆಹಾರಗಳಿಂದ ಪೋಷಿಸಲ್ಪಡುತ್ತದೆ; ಆದ್ದರಿಂದ ಅದು ಸ್ವತಃ ಜಡವೂ, (ಕಲ್ಲಿನಂತೆ) ಗ್ರಹಿಸಲ್ಪಡುವ ವಸ್ತುವೂ ಆಗಿದೆ. ಆದರೆ ನಾನು ಜಡವಲ್ಲ; ದೇಹದ ಅರಿವು ನನಗಿದೆ. ಆದ್ದರಿಂದ, ನಶ್ವರವಾದ ಈ ದೇಹವು ನಾನಲ್ಲ.

ವಿವಿಧವೃತ್ತಿಮಚ್ಚೇತೋ ವೇದ್ಯಞ್ಚ ಭೌತಿಕಂ ಜಡಮ್ ।
ಸಾತ್ವಿಕಾದ್ಯನ್ನಪಾನೈಸ್ತಚ್ಚಾನ್ನಾದಿಭಿನ್ನರೂಪಭೃತ್ ॥ 33 ॥
ವೃತ್ತಿಜ್ಞೇಯಾऽನ್ಯವೃತ್ತ್ಯಾ ಚೇದನವಸ್ಥಾऽಪತೇದ್ಬಲಾತ್ ।
ನಾಹಂ ಮನೋऽಜಡತ್ವಾಚ್ಚ ವೃತ್ತೀನಾಂ ಭಾಸಕತ್ವತಃ ॥ 34 ॥

ಮನಸ್ಸು (ಗ್ರಹಿಕೆಗಳು, ಆಲೋಚನೆಗಳು ಮುಂತಾದವುಗಳ) ವಿವಿಧ ವೃತ್ತಿಗಳ ಸಮೂಹವು. (ಶಾಸ್ತ್ರವು ತಿಳಿಸುವಂತೆ) ಅದು (ಪೃಥಿವಿಯಂತಹ) ಪಂಚಭೂತಗಳಿಂದ ನಿರ್ಮಿತವಾಗಿದ್ದು ಜಡವಾಗಿದೆ. ಹೀಗಿರುವುದರಿಂದ, ಸೇವಿಸಲ್ಪಡುವ ಆಹಾರ-ಪಾನಗಳ ಪ್ರಭಾವಕ್ಕೆ ಒಳಗಾಗುತ್ತದೆ. ಸಾತ್ತ್ವಿಕ, ರಾಜಸಿಕ ಮತ್ತು ತಾಮಸಿಕ ಆಹಾರ–ಪಾನಗಳು (ಅಂದರೆ,

ಕ್ರಮವಾಗಿ ಗೋವಿನ ಹಾಲು, ಅತ್ಯಂತ ಖಾರವಾದ ಆಹಾರ ಮತ್ತು ಮಾದಕ ವಸ್ತುಗಳು) ಮನಸ್ಸನ್ನು ಅನುಕ್ರಮವಾಗಿ ಪ್ರಶಾಂತ, ಉದ್ರೇಕ ಮತ್ತು ಮೋಹಕ್ಕೆ ಒಳಪಡಿಸುತ್ತವೆ. ಅಲ್ಲದೆ, ಮನಸ್ಸು ಅರಿಯಲ್ಪಡುವ ವಸ್ತುವಾಗಿದೆ. ಒಂದು ಮಾನಸಿಕ ವೃತ್ತಿಯನ್ನು ಮತ್ತೊಂದು ವೃತ್ತಿಯು ತಿಳಿಯುತ್ತದೆ ಎಂದಾದರೆ (ಆ ಎರಡನೆಯ ವೃತ್ತಿಯನ್ನು ಪ್ರಕಟಿಸಲು ಮೂರನೆಯ ವೃತ್ತಿಯ ಅಗತ್ಯವಿರುತ್ತದೆ; ಮತ್ತು ಆ ಮೂರನೆಯ ವೃತ್ತಿಯನ್ನು ತೋರ್ಪಡಿಸಲು ನಾಲ್ಕನೆಯ ವೃತ್ತಿಯ ಅಗತ್ಯವಿರುತ್ತದೆ; ಹೀಗೆ ಅಂತ್ಯವಿಲ್ಲದೆ ಹೋಗುವ ಕಾರಣ) ಅನವಸ್ಥಾದೋಷವು ಉಂಟಾಗುತ್ತದೆ. (ಜಡವೂ ಜ್ಞೇಯವೂ ಆಗಿರುವ ಮನಸ್ಸಿಗೆ ವಿರುದ್ಧವಾಗಿ) ನಾನು ಚೈತನ್ಯಸ್ವರೂಪನಾಗಿದ್ದು, (ಗ್ರಹಿಕೆ, ಸುಖ, ದುಃಖ, ಆಲೋಚನೆ ಇತ್ಯಾದಿಗಳನ್ನು ಅರಿಯುವವನಾಗಿ) ಪ್ರತಿಯೊಂದು ವೃತ್ತಿಯನ್ನೂ ಬೆಳಗುತ್ತೇನೆ. ಆದ್ದರಿಂದ ನಾನು ಮನಸ್ಸಲ್ಲ.

ಅಹಂ ಕರೋಮ್ಯಹಂ ದುಃಖೀತ್ಯಾದಿಕಾಸು ಪ್ರತೀತಿಷು ।
ಯೋಹಮರ್ಥೋಽಹ್ಯಹಙ್ಕಾರಃ ಕರ್ತೃಭೋಕ್ತ್ರಾದಿರೂಪಭೃತ್ ॥ 35 ॥
ಸ ಲೀಯತೇ ಸುಷುಪ್ತೌ ತು ಸುಪ್ತಿರ್ಮಯಾನುಭೂಯತೇ ।
ಸುಷುಪ್ತೌ ಸುಖಮಸ್ವಾಪ್ಸಂ ನಾಹಂ ಕಿಞ್ಚಿದವೇದಿಷಮ್ ॥ 36 ॥
ಇತಿ ಪ್ರತ್ಯಭಿಜಾನಾತಿ ಸುಷುಪ್ತೇರುತ್ಥಿತೋ ಜನಃ ।
ಸುಷುಪ್ತ್ಯನುಭವಾಭಾವೇ ಪ್ರತ್ಯಭಿಜ್ಞಾ ಕಥಂ ಭವೇತ್ ॥ 37 ॥

'ನಾನು ಇದನ್ನು ಮಾಡುತ್ತೇನೆ', 'ನಾನು ದುಃಖಿತನಾಗಿದ್ದೇನೆ', ಮುಂತಾದ ಭಾವನೆಗಳಲ್ಲಿ ವ್ಯಕ್ತವಾಗುವ 'ನಾನು' ಎಂಬ ಅಹಂಕಾರವು ಕರ್ತೃ-ಭೋಕ್ತೃ ರೂಪವನ್ನು ಹೊಂದಿದೆ. ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳಲ್ಲಿ ವ್ಯಕ್ತವಾಗುವ ಈ 'ನಾನು', ಸುಷುಪ್ತಿಯ (ಗಾಢನಿದ್ರೆಯ) ಸ್ಥಿತಿಯಲ್ಲಿ ಲೀನವಾಗುತ್ತದೆ. (ಕನಸಿಲ್ಲದ ಗಾಢನಿದ್ರೆಯಲ್ಲಿ ಯಾವುದೇ ವಸ್ತು, ಆಲೋಚನೆ ಅಥವಾ 'ನಾನು' ಎಂಬ ಭಾವನೆ ತೋರುವುದಿಲ್ಲ ಎಂಬುದು ಎಲ್ಲರ ಸಾಮಾನ್ಯ ಅನುಭವ.) ಆದರೆ, ನಿಜವಾದ ನಾನು, ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳಲ್ಲಿ ಮಾತ್ರವಲ್ಲ, ಸುಷುಪ್ತಿಯಲ್ಲೂ ಇರುತ್ತೇನೆ; ನಾನು ಸುಷುಪ್ತಿಗೆ ಸಾಕ್ಷಿ. ಸುಷುಪ್ತಿಯಿಂದ ಎಚ್ಚರಗೊಂಡ ವ್ಯಕ್ತಿ, ಅದನ್ನು ಕುರಿತು, "ನಾನು ಸುಖವಾಗಿ ನಿದ್ರಿಸಿದೆ; ನನಗೆ ಏನೇನೂ ತಿಳಿಯಲಿಲ್ಲ", ಎಂದು ನೆನಪಿಸಿಕೊಳ್ಳುತ್ತಾನೆ. ಸುಷುಪ್ತಿಯ ಅನುಭವ ಆಗಿರುವುದರಿಂದಲೇ ಇಂತಹ ಸ್ಮರಣೆ ಸಾಧ್ಯವಾಗುತ್ತದೆ; ಸುಷುಪ್ತಿಗೆ ಸಾಕ್ಷಿಯೇ ಇಲ್ಲದಿದ್ದರೆ, ಅಂತಹ ಯಾವ ಸ್ಮರಣೆಯೂ ಇರುತ್ತಿರಲಿಲ್ಲ.

ಧೃತಾರ್ಕಪ್ರತಿಬಿಮ್ಬತ್ವಾದ್ಯೋ ಪ್ರಭಾವಾನ್ಪ್ರತೀಯತೇ ।
ಸ ಏವ ಪಾರ್ಥಿವಾದರ್ಶೋಽಪ್ರಭಃ ಸ್ವರೂಪತಸ್ತಥಾ ॥ 38 ॥
ಧೃತಚಿತ್ಪ್ರತಿಬಿಮ್ಬತ್ವಾದ್ಯಾ ಭ್ರಾನ್ತ್ಯಾ ಚೇತನಾ ಮತಾ ।
ಕರ್ತೃತ್ವಾದಿಮತೀ ಸಾ ಧೀರ್ವಸ್ತುತೋ ಭೌತಿಕೀ ಜಡಾ ॥ 39 ॥

ಕನ್ನಡಿಯು ಸೂರ್ಯನ ಪ್ರತಿಬಿಂಬವನ್ನು ಒಳಗೊಂಡಿರುವುದರಿಂದ ಪ್ರಕಾಶಮಾನವಾಗಿ (ವಸ್ತುಗಳನ್ನು ಬೆಳಗುವ ಸಾಮರ್ಥ್ಯವುಳ್ಳದ್ದಾಗಿ) ತೋರುತ್ತದೆ. ಆದರೆ ಪಾರ್ಥಿವವಾದ ಆ ಕನ್ನಡಿಯು ಸ್ವಭಾವತಃ ಪ್ರಕಾಶಮಾನವಲ್ಲ. ಹಾಗೆಯೇ, ಚೈತನ್ಯವನ್ನು ಪ್ರತಿಬಿಂಬಿಸುವ ಕಾರಣ, ಬುದ್ಧಿಯು ಕರ್ತೃ–ಭೋಕ್ತೃವಾಗಿ ಚೈತನ್ಯವುಳ್ಳದ್ದಾಗಿ ತೋರುತ್ತದೆ. ಆದರೆ (ಶಾಸ್ತ್ರವು ತಿಳಿಸುವಂತೆ) ಪಾಂಚಭೌತಿಕವಾದ ಈ ಬುದ್ಧಿಯೂ ನಿಜಕ್ಕೂ ಸ್ವಭಾವತಃ ಜಡವೇ.

ಧಿಯಂ ವೇದ್ಮ್ಯಹಮಾಕಾರಾಂ ಸಾಕ್ಷಿತ್ವೇನ ಸುಖಾದಿವತ್।
ದೇಹಾದೀನಾಮನಾತ್ಮತ್ವಂ ವೇದ್ಯತ್ವಂ ಚಾಹ ಕೇಶವಃ ॥ 40 ॥
ಇದಂ ಶರೀರಂ ಕೌನ್ತೇಯ ಕ್ಷೇತ್ರಮಿತ್ಯಭಿಧೀಯತೇ।
ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥ 41 ॥
ಮಹಾಭೂತಾನ್ಯಹಙ್ಕಾರೋ ಬುದ್ಧಿರವ್ಯಕ್ತಮೇವ ಚ।
ಇನ್ದ್ರಿಯಾಣಿ ದಶೈಕಞ್ಚ ಪಞ್ಚ ಚೇನ್ದ್ರಿಯಗೋಚರಾಃ ॥ 42 ॥
ಇಚ್ಛಾ ದ್ವೇಷಃ ಸುಖಂ ದುಃಖಂ ಸಙ್ಘಾತಶ್ಚೇತನಾ ಧೃತಿಃ।
ಏತತ್ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್ ॥ 43 ॥

ಮನಸ್ಸಿನ ಸುಖ, ದುಃಖ, ಇತ್ಯಾದಿಗಳಿಗೆ ನಾನು ಹೇಗೆ ಸಾಕ್ಷಿಯೋ, 'ನಾನು' ಎಂಬ ಭಾವನೆಗೆ ವಿಷಯವಾದ ಜಡವಾದ ಬುದ್ಧಿಗೆ ನಾನು ಸಾಕ್ಷಿಯಾಗಿದ್ದೇನೆ. ದೇಹ, ಮನಸ್ಸು, ಬುದ್ಧಿ, ಮುಂತಾದವು ಆತ್ಮನಲ್ಲ; ಅವು ಜ್ಞೇಯವಸ್ತುಗಳಷ್ಟೇ ಎಂದು ಭಗವಾನ್ ಕೃಷ್ಣನು ಉಪದೇಶಿಸಿದ್ದಾನೆ. ಅವನು ಹೀಗೆಂದಿದ್ದಾನೆ: 'ಹೇ ಕುಂತೀಪುತ್ರ, (ಭೂಮಿಯಲ್ಲಿ ಬೆಳೆಗಳಂತೆ ಶರೀರದಲ್ಲಿ ಕರ್ಮಫಲಗಳು ಹುಟ್ಟುವುದರಿಂದ) ಈ ಶರೀರವು 'ಕ್ಷೇತ್ರ' ಎಂದು ಕರೆಯ-ಲ್ಪಡುತ್ತದೆ. ಇದನ್ನರಿಯುವವನನ್ನು ತತ್ತ್ವಜ್ಞಾನಿಗಳು "ಕ್ಷೇತ್ರಜ್ಞ" (ಕ್ಷೇತ್ರವನ್ನು ಅರಿಯುವವನು) ಎನ್ನುತ್ತಾರೆ...(ಭೂಮಿ, ಜಲ, ಅಗ್ನಿ, ವಾಯು ಮತ್ತು ಆಕಾಶ ಎಂಬ) ಮಹಾಭೂತಗಳು, ಅಹಂಕಾರ, ಬುದ್ಧಿ, ಅವ್ಯಕ್ತ (ಅಂದರೆ, ಮೂಲಪ್ರಕೃತಿ, ಮಾಯೆ), (ಐದು ಜ್ಞಾನೇಂದ್ರಿಯ-ಗಳು, ಐದು ಕರ್ಮೇಂದ್ರಿಯಗಳು — ಹೀಗೆ) ಹತ್ತು ಇಂದ್ರಿಯಗಳು ಹಾಗೂ ಮನಸ್ಸು, (ಶಬ್ದ ಇತ್ಯಾದಿ) ಐದು ಇಂದ್ರಿಯವಿಷಯಗಳು, ಇಚ್ಛೆ, ದ್ವೇಷ, ಸುಖ, ದುಃಖ, (ಶರೀರ-ಇಂದ್ರಿಯಗಳ) ಸಮೂಹ, ಚೇತನತೆ ಮತ್ತು ಧೃತಿ — ಈ ಎಲ್ಲವನ್ನು ತಮ್ಮ ವಿಕಾರಗಳೊಂದಿಗೆ ಕ್ಷೇತ್ರವೆಂದು ಸಂಕ್ಷೇಪವಾಗಿ ಹೇಳಲಾಗಿದೆ (ಭಗವದ್ಗೀತೆ 13.1; 13.5–6).'

ಅನ್ಯೋನ್ಯವ್ಯಭಿಚಾರಿಣ್ಯೋ ಜಾಗ್ರತ್ಸ್ವಪ್ನಸುಷುಪ್ತಯಃ।
ತಾಸಾಮಾದ್ಯನ್ತವತ್ತ್ವಾಚ್ಚ ಸಿದ್ಧ್ಯೇತ್ತಾ ವಿತಥಾ ಇತಿ ॥ 44 ॥
ಅಹಂ ತಿಸೃಷ್ವವಸ್ಥಾಸು ವರ್ತ ಏವ ಚಿದಾತ್ಮನಾ।
ತಸ್ಮಾನ್ನಾಹಮವಸ್ಥಾವಾನ್ನ ಚ ಮಾಂ ದೂಷಯನ್ತಿ ತಾಃ ॥ 45 ॥

ಜಾಗ್ರತ್ ಸ್ಥಿತಿಯಲ್ಲಿ ಸ್ವಪ್ನ ಮತ್ತು ಸುಷುಪ್ತಿಗಳು ಇರುವುದಿಲ್ಲ; ಸ್ವಪ್ನದಲ್ಲಿ ಜಾಗ್ರತ್ ಮತ್ತು ಸುಷುಪ್ತಿಗಳು ಇರುವುದಿಲ್ಲ; ಸುಷುಪ್ತಿಯಲ್ಲಿ ಜಾಗ್ರತ್ ಮತ್ತು ಸ್ವಪ್ನಗಳು ಇರುವುದಿಲ್ಲ — ಹೀಗೆ ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳು ಪರಸ್ಪರ ಸಹಅಸ್ತಿತ್ವದಲ್ಲಿರುವುದಿಲ್ಲ. (ವಸ್ತುತಃ ಸತ್ಯವಾದುದು ಎಂದೆಂದಿಗೂ ಅಸ್ತಿತ್ವದಲ್ಲಿರುತ್ತದೆ; ಆದ್ದರಿಂದ) ಆ ಅವಸ್ಥೆಗಳು ಹುಟ್ಟಿ ನಾಶ-ವಾಗುವ ಕಾರಣ, ಮಿಥ್ಯೆಯಾಗಿರಬೇಕು. ಆದರೆ ನಾನು ಈ ಮೂರು ಅವಸ್ಥೆಗಳಲ್ಲಿಯೂ ಶುದ್ಧ ಚೈತನ್ಯಸ್ವರೂಪನಾಗಿ ನಿರಂತರವಾಗಿ ಇರುತ್ತೇನೆ. ಆದ್ದರಿಂದ, ಆ ಅವಸ್ಥೆಗಳು ನನ್ನ ಸ್ವರೂಪಧರ್ಮಗಳಲ್ಲ ಮತ್ತು ಅವುಗಳಿಂದ ನಾನು ಪ್ರಭಾವಿತನಾಗುವುದಿಲ್ಲ.

ವಿವಿಧಾನ್ವಿಷಯಾನ್ಸೂರ್ಯಸ್ತದ್ವ್ಯತಿರಿಕ್ತ ಏಕಲಃ।
ತದದೂಷಿತಭಾರೂಪೋ ದ್ಯೋತಯೇದ್ಧಿ ಯಥಾ ತಥಾ ॥ 46 ॥
ವಿವಿಧಾನ್ವಿಷಯಾನ್ಸಂವಿತ್ತದ್ಭಿನ್ನಾ ನಿಷ್ಕಲಾ ತಥಾ।
ಅದೂಷಿತಾऽವಿಕಾರೈಕಾ ತಾನ್ಭಾಸಯತಿ ಜಾಗರೇ ॥ 47 ॥
ಸ್ವಪ್ನೇ ವಿವಿಧರೂಪಾಣಿ ತದ್ಭಿನ್ನೈಕಾ ಚಿದೀಕ್ಷತೇ।
ಸುಪ್ತಾವಾವರಕಾಜ್ಞಾನಂ ವೇದಯನ್ಯೇವ ಚಿತ್ಪೃಥಕ್ ॥ 48 ॥

ಸೂರ್ಯನು ವಿವಿಧ ವಸ್ತುಗಳಿಗಿಂತ ಭಿನ್ನನು, ಅವುಗಳಿಂದ ಅಪ್ರಭಾವಿತನು ಮತ್ತು ಏಕೈಕನಾಗಿದ್ದು ಅವುಗಳನ್ನು ಬೆಳಗುತ್ತಾನೆ. ಅಂತೆಯೇ, ಜಾಗ್ರತ್ತಿನಲ್ಲಿ ಚೈತನ್ಯವು ವಿವಿಧ ವಸ್ತುಗಳಿಗಿಂತ ಭಿನ್ನವೂ, ಅವುಗಳಿಂದ ಅಪ್ರಭಾವಿತವೂ, ಏಕೈಕವೂ, ಅವಯವರಹಿತವೂ ಮತ್ತು ನಿರ್ವಿಕಾರವೂ ಆಗಿದ್ದು, ಅವುಗಳನ್ನು ಪ್ರಕಾಶಪಡಿಸುತ್ತದೆ. ಸ್ವಪ್ನಾವಸ್ಥೆಯಲ್ಲಿಯೂ ಚೈತನ್ಯವು (ಸ್ವಪ್ನಪ್ರಪಂಚದ) ನಾನಾ ರೂಪಗಳಿಂದ ಭಿನ್ನವು, ಅವುಗಳಿಂದ ಅಪ್ರಭಾವಿತವು ಮತ್ತು ಒಂದೇ ಆಗಿದ್ದು ಸಾಕ್ಷಿಯಾಗಿ ಅವುಗಳನ್ನು ಅರಿಯುತ್ತದೆ. ಸುಷುಪ್ತಿಯಲ್ಲಿಯೂ (ಆತ್ಮ–ಬ್ರಹ್ಮಸ್ವರೂಪವನ್ನು ಆವರಿಸಿರುವ, ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳಲ್ಲಿ ಆತ್ಮನನ್ನು ತಪ್ಪಾಗಿ ಕಲ್ಪಿಸಿಕೊಳ್ಳುವುದಕ್ಕೆ ಆಧಾರವಾದ) ಮೂಲ ಅಜ್ಞಾನವನ್ನು ಅದರಿಂದ ಭಿನ್ನವಾದ ಚೈತನ್ಯವು ಸಾಕ್ಷಿಯಾಗಿ ತಿಳಿಯುತ್ತದೆ.

ದೃಶ್ಯಂ ಭಿನ್ನಂ ಚಿದೇಕಾ ಸಾ ನ ದೃಶ್ಯಾ ಸ್ಯಾತ್ಕಥಞ್ಚನ।
ತದ್ಭಾಸ್ಯತ್ವಾತ್ಪ್ರಮಾತ್ರಾದೇಃ ಸ್ವಸ್ಯ ಸ್ವಾಗ್ರಹಣತ್ವತಃ ॥ 49 ॥

ತಿಳಿಯಲ್ಪಡುವ ವಿಷಯಗಳಲ್ಲಿ ಭೇದಗಳಿದ್ದರೂ, ಈ ಅವಸ್ಥೆಗಳನ್ನು ಪ್ರಕಾಶಪಡಿಸುವ ಚೈತನ್ಯವು ಏಕೈಕ. ಚೈತನ್ಯವು ಎಂದಿಗೂ (ಮಡಕೆಯಂತೆ) ವೇದ್ಯವಾಗಿ ತಿಳಿಯಲ್ಪಡುವುದಿಲ್ಲ. ಜ್ಞಾನಕ್ರಿಯೆಯ ಕರ್ತೃವನ್ನೂ ಬೆಳಗುವುದರಿಂದ, ತನ್ನಿಂದ ಭಿನ್ನವಾದ ಯಾವುದರಿಂದಲೂ ವಿಷಯವಾಗಿ ಅದು ತಿಳಿಯಲ್ಪಡುವುದಿಲ್ಲ. ಒಂದೇ ಅವಿಭಾಜ್ಯ ವಸ್ತುವು ಜ್ಞಾತೃವೂ ಜ್ಞೇಯವೂ ಆಗದ ಕಾರಣ, ತನ್ನನ್ನು ತನ್ನಿಂದಲೇ ವಿಷಯದಂತೆ ಅರಿತುಕೊಳ್ಳಲು ಸಾಧ್ಯವಿಲ್ಲ.

ದೇಹಾದ್ಯತೀತಕೂಟಸ್ಥಶುದ್ಧಚೈತನ್ಯಮಸ್ಮ್ಯತಃ।
ಈದೃಶೋಽಹಂ ಪರಂ ಬ್ರಹ್ಮ ಬ್ರವೀತ್ಯೇವಂ ಶ್ರುತಿಃ ಸ್ವಯಮ್ ॥ 50 ॥

ಹೀಗಾಗಿ, ನಾನು ದೇಹ, ಮನಸ್ಸು ಮತ್ತು ಬುದ್ಧಿಗಳನ್ನೂ, ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಎಂಬ ಅವಸ್ಥೆಗಳನ್ನೂ ಮೀರಿದ, ಶುದ್ಧ ಮತ್ತು ನಿರ್ವಿಕಾರ ಚೈತನ್ಯಸ್ವರೂಪನು. ಶ್ರುತಿಯೇ (ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ ಎಂಬಂತಹ ಘೋಷಣೆಗಳ ಮೂಲಕ) ಇಂತಹ ನಾನು ಪರಬ್ರಹ್ಮ ಎಂದು ಪ್ರಕಟಿಸುತ್ತದೆ.

ಸತ್ಯಂ ಜ್ಞಾನಮನನ್ತಂ ತದ್ಬ್ರಹ್ಮೇತಿ ಬ್ರಹ್ಮಲಕ್ಷಣಮ್।
ಸತ್ತಾಮಾತ್ರಂ ಸದಾऽಬಾಧ್ಯಂ ಕೂಟಸ್ಥನಿತ್ಯಮೇವ ತತ್ ॥ 51 ॥
ತದೇಕರಸಚಿನ್ಮಾತ್ರಂ ಸಾದಿಧೀಪ್ರತ್ಯಯಂ ನ ಹಿ।
ಪರಿಚ್ಛಿನ್ನಂ ನ ತದ್ದೇಶಕಾಲಾಭ್ಯಾಂ ವಸ್ತುತಸ್ತಥಾ ॥ 52 ॥

'ಬ್ರಹ್ಮಜ್ಞಾನಿಯು ಪರವಸ್ತುವನ್ನು ಪಡೆಯುತ್ತಾನೆ' ಎಂದು ಘೋಷಿಸಿದ ಬಳಿಕ, 'ಸತ್ಯ (ಅಳಿಯದು), ಜ್ಞಾನ (ಚೈತನ್ಯ) ಮತ್ತು ಅನಂತ (ಮಿತಿಯಿಲ್ಲದ್ದು)' ಎಂಬುದನ್ನು ತೈತ್ತಿರೀಯ-ಉಪನಿಷತ್ತು ಬ್ರಹ್ಮದ ಲಕ್ಷಣವಾಗಿ ನಿರೂಪಿಸುತ್ತದೆ. ಬ್ರಹ್ಮವು 'ಸತ್ಯ' ಎಂಬ ಪದದ ಮೂಲಕ, ಬ್ರಹ್ಮವು ಎಂದಿಗೂ ಬಾಧಿತವಾಗುವುದಿಲ್ಲ, ನಿರ್ವಿಕಾರ ನಿತ್ಯವೂ ಪಾರಮಾರ್ಥಿಕ ಸತ್ತಿನ (ಇರುವಿಕೆಯ) ಸ್ವರೂಪವೂ ಆಗಿದೆ ಎಂದು ಶ್ರುತಿಯು ಬೋಧಿಸುತ್ತದೆ. ಬ್ರಹ್ಮವು 'ಜ್ಞಾನ' ಎಂಬ ಪದದ ಮೂಲಕ, ಆದಿ ಮತ್ತು ಅಂತ್ಯವುಳ್ಳ ಮಾನಸಿಕ ಜ್ಞಾನವಲ್ಲದೆ, ಭೇದ-ರಹಿತವಾದ ಶುದ್ಧ ಚೈತನ್ಯವೇ ಬ್ರಹ್ಮ ಎಂದು ಶ್ರುತಿಯು ತಿಳಿಸುತ್ತದೆ. ಬ್ರಹ್ಮವು 'ಅನಂತ' ಎಂಬ ಪದದ ಮೂಲಕ, ಅದು ದೇಶ, ಕಾಲ ಅಥವಾ ವಸ್ತುಗಳಿಂದ ಸೀಮಿತವಲ್ಲ ಎಂದು ಶ್ರುತಿಯು ಬೋಧಿಸುತ್ತದೆ. (ಯಾವ ವಸ್ತುವು ಯಾವುದೋ ಕಾಲದಲ್ಲಿ ಅಸ್ತಿತ್ವದಲ್ಲಿದ್ದು ಮತ್ತೊಂದರಲ್ಲಿ ಇರದಿದ್ದರೆ, ಅದು ಕಾಲದಿಂದ ಸೀಮಿತವಾಗಿದೆ. ಯಾವುದೋ ಒಂದು ಸ್ಥಳದಲ್ಲಿ ಇರದ ವಸ್ತುವು ದೇಶದಿಂದ ಸೀಮಿತವಾಗಿದೆ. ಒಂದು ವಸ್ತುವು ಮತ್ತೊಂದರಿಂದ ವಾಸ್ತವವಾಗಿ ಬೇರೆಯಾಗಿದ್ದರೆ, ಅದು ಆ ಎರಡನೆಯ ವಸ್ತುವಿನಿಂದ ಸೀಮಿತವಾಗಿದೆ. ಬ್ರಹ್ಮವು ಅನಂತವಾಗಿರುವುದರಿಂದ, ಬ್ರಹ್ಮವಿಲ್ಲದ ಯಾವುದೇ ಕಾಲವಿಲ್ಲ; ಬ್ರಹ್ಮವಿಲ್ಲದ ಯಾವುದೇ ಸ್ಥಳವಿಲ್ಲ; ಮತ್ತು ಬ್ರಹ್ಮಕ್ಕಿಂತ ಭಿನ್ನವಾದ ಯಾವುದೇ ವಸ್ತುವೂ ವಾಸ್ತವವಾಗಿ ಅಸ್ತಿತ್ವದಲ್ಲಿಲ್ಲ.)

ತದ್ಬ್ರಹ್ಮಾತ್ಮನ ಆಕಾಶಃ ಸಮ್ಭೂತೋ ವಿಯತೋऽನಿಲಃ।
ವಾಯೋರಗ್ನಿಃ ಶುಚೇರಾಪೋऽದ್ಭ್ಯೋ ಜಾತಾ ಪೃಥಿವೀ ತತಃ ॥ 53 ॥
ಯತೋ ಭೂತಾನಿ ಜಾಯನ್ತೇ ಯೇನ ಜಾತಾನಿ ಜೀವನ್ತಿ।
ಯಂ ವಿಶನ್ತೀತಿ ವೇದೋಕ್ತೇರ್ಜಗತೋ ಬ್ರಹ್ಮ ಕಾರಣಮ್ ॥ 54 ॥

(ಈ ಕೆಳಗಿನ ಎರಡು ಶ್ರುತಿವಾಕ್ಯಗಳು ಬ್ರಹ್ಮವು ಜಗತ್ತಿನ ಕಾರಣವೆಂದು ಸೂಚಿಸುತ್ತವೆ ಮತ್ತು ಯಾವುದೇ ವಸ್ತುವಿನಿಂದ ಬ್ರಹ್ಮವು ಸೀಮಿತವಲ್ಲ ಎಂಬುದಕ್ಕೆ ಸಮರ್ಥನೆಯನ್ನು ನೀಡುತ್ತವೆ.) 'ಆತ್ಮವೇ ಆದ ಬ್ರಹ್ಮದಿಂದ ಆಕಾಶವು (ಆಕಾಶತತ್ತ್ವವು) ಉತ್ಪನ್ನವಾಯಿತು. ಆಕಾಶದಿಂದ ವಾಯು (ವಾಯುತತ್ತ್ವವು) ಹುಟ್ಟಿತು. ವಾಯುವಿನಿಂದ ಅಗ್ನಿಯು (ಅಗ್ನಿತತ್ತ್ವವು) ಜನಿಸಿತು. ಅಗ್ನಿಯಿಂದ ಜಲ (ಜಲತತ್ತ್ವವು) ಹುಟ್ಟಿತು. ಜಲದಿಂದ ಪೃಥಿವೀ (ಪೃಥಿವೀತತ್ತ್ವವು) ಉದ್ಭವಿಸಿತು (ತೈತ್ತಿರೀಯ-ಉಪನಿಷತ್ 2.1.1).' 'ಯಾವುದರಿಂದ ಈ ಎಲ್ಲ ಭೂತಗಳು ಹುಟ್ಟುತ್ತವೆಯೋ, ಹುಟ್ಟಿದ ಬಳಿಕ (ಸ್ಥಿತಿಕಾಲದಲ್ಲಿ) ಅವು ಯಾವುದರಿಂದಾಗಿ ಜೀವಿಸುತ್ತವೆಯೋ, ಯಾವುದನ್ನು ಸೇರಿ ಅವು ಯಾವುದರಲ್ಲಿ ಲೀನವಾಗುತ್ತವೆಯೋ — ಅದು ಬ್ರಹ್ಮ (ತೈತ್ತಿರೀಯ-ಉಪನಿಷತ್ 3.1.1).' ಇಂತಹ ವಾಕ್ಯಗಳ ಮೂಲಕ ಶ್ರುತಿಯು ಬ್ರಹ್ಮವನ್ನು ಇಡೀ ಜಗತ್ತಿನ ಕಾರಣವೆಂದು ನಿರೂಪಿಸುತ್ತದೆ.

ನ ತದ್ವಿಕಾರಿ ಸತ್ಯತ್ವಾನ್ನಾನ್ಯಸ್ತದ್ವಸ್ತು ತಸ್ಯ ಚ ।
ಅನನ್ತತ್ವಾದತೋಽವಶ್ಯಂ ಬ್ರಹ್ಮಕಾರ್ಯಂ ಜಗನ್ಮೃಷಾ ॥ 55 ॥

ಬ್ರಹ್ಮವು 'ಸತ್ಯ'; ಆದುದರಿಂದ ಅದು ಎಂದಿಗೂ ಯಾವುದೇ ವಿಕಾರಕ್ಕೂ ಒಳಗಾಗದು. ಆದ ಕಾರಣ, ಅದು ನಿಜಕ್ಕೂ ಪರಿಣಾಮವನ್ನು ಹೊಂದಿ ಯಾವುದನ್ನೂ ಉತ್ಪತ್ತಿ ಮಾಡಲಾರದು. ಮೇಲಾಗಿ, ಬ್ರಹ್ಮವು 'ಅನಂತ' (ಮತ್ತದು ವಸ್ತುಗಳಿಂದ ಸೀಮಿತವಲ್ಲ); ಹಾಗಾಗಿ, ಬ್ರಹ್ಮಕ್ಕಿಂತ ವಸ್ತುತಃ ಭಿನ್ನವಾದ ಯಾವುದೂ ಉತ್ಪನ್ನವಾಗರಲು ಸಾಧ್ಯವಿಲ್ಲ. ಆದುದರಿಂದ, ಬ್ರಹ್ಮವು ಕಾರಣವೆಂದು ಬೋಧಿಸಲ್ಪಟ್ಟಿರುವ ಈ ಜಗತ್ತು ನಿಜಕ್ಕೂ ಬ್ರಹ್ಮದಿಂದ ಹುಟ್ಟಿರಲಾರದು ಮತ್ತು ತನ್ನದೇ ಆದ ಸ್ವತಂತ್ರವಾದ ವಾಸ್ತವಿಕತೆಯನ್ನು ಹೊಂದಿರಲಾರದು; ಅದು ಮಿಥ್ಯೆಯಾಗಿರಬೇಕು (ಉದಾಹರಣೆಗೆ, ಮರುಭೂಮಿಯ ಮರಳಿನಲ್ಲಿ ತೋರುವ ಮತ್ತು ಅದನ್ನೇ ಅಧಿಷ್ಠಾನವಾಗಿ ಹೊಂದಿರುವ ಮರೀಚಿಕೆಯಂತೆ, ಬ್ರಹ್ಮದಲ್ಲಿ ಜಗತ್ತು ಭ್ರಮಾತ್ಮಕ ತೋರಿಕೆಯಾಗಿರಬೇಕು).

ಭೇದಸ್ಯೌಪಾಧಿಕತ್ವಾಚ್ಚ ಮಿಥ್ಯೋಪಾಧಿರ್ಯತಸ್ತತಃ ।
ಆದಿತ್ಯೇ ಪುರುಷೇ ಯಸ್ಯ ಏಕ ಇತ್ಯವದಚ್ಛ್ರುತಿಃ ॥ 56 ॥
ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।
ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ॥ 57 ॥
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ।
ವಿಚಾರ್ಯ ಗುರವಶ್ಚೈವಂ ಪ್ರಾಪ್ಯ ಬ್ರಹ್ಮತ್ವನಿಶ್ಚಯಮ್ ॥ 58 ॥
ಅಹಮೇವ ಪರಂ ಬ್ರಹ್ಮ ವಾಸುದೇವಾಖ್ಯಮವ್ಯಯಮ್ ।
ಮನಸ್ಯೇವಂ ಪರಿತ್ವಾಽಸ್ಥುರ್ಬ್ರಹ್ಮಾತ್ಮಗತಚೇತಸಾ ॥ 59 ॥

(ಮಡಕೆಯ ರೂಪದ ಉಪಾಧಿಯಿಂದಾಗಿ ಮಡಕೆಯೊಳಗಿನ ಆಕಾಶವು ಸಾರ್ವತ್ರಿಕವಾದ ಆಕಾಶಕ್ಕಿಂತ ಭಿನ್ನವೆಂಬಂತೆ ತೋರುವಂತೆ) ದೇಹದ ಮತ್ತು ಮನಸ್ಸಿನಂತಹ ಉಪಾಧಿಗಳಿಂದಾಗಿ ಜೀವದ ಮತ್ತು ಬ್ರಹ್ಮದ ನಡುವೆ ಭೇದವು ಕಾಣಿಸಿಕೊಳ್ಳುತ್ತದೆ. ಮಾತ್ರವಲ್ಲ, ಮನಸ್ಸಿನಂತಹ ಉಪಾಧಿಗಳೂ ಮಿಥ್ಯೆಯಾಗಿವೆ. ಆದ್ದರಿಂದ, 'ಈ ಪುರುಷನಲ್ಲಿ ಇರುವವನು ಮತ್ತು ಆ ಸೂರ್ಯನಲ್ಲಿ ಇರುವವನು ಒಬ್ಬನೇ (ತೈತ್ತಿರೀಯ-ಉಪನಿಷತ್ 2.8.5)' ಎಂಬಂಥ ವಾಕ್ಯಗಳ ಮೂಲಕ ಶ್ರುತಿಯು ನಾನು ಬ್ರಹ್ಮ ಎಂದು ಬೋಧಿಸುತ್ತದೆ. ಅದೇ ರೀತಿಯಲ್ಲಿ, ಕೃಷ್ಣಪರಮಾತ್ಮನು, 'ಮೇಲಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ (ಈಶ್ವರನಾದ) ನನ್ನನ್ನು ಕ್ಷೇತ್ರಜ್ಞನೆಂದು ತಿಳಿದುಕೋ (ಭಗವದ್ಗೀತೆ 13.2)', ಎಂದೂ, 'ಸಮಾಧಿಯಲ್ಲಿ ಯಾರ ಮನಸ್ಸು ಲೀನವಾಗಿದೆಯೋ ಮತ್ತು ತನ್ನ ಆತ್ಮಕ್ಕೂ ಬ್ರಹ್ಮಕ್ಕೂ ಅಭೇದವನ್ನು ಯಾರು ಕಾಣುತ್ತಾನೋ, ಅವನು (ಹಿರಣ್ಯಗರ್ಭನಿಂದ ಹಿಡಿದು ಹುಲ್ಲಿನ ಕಂತೆಯವರೆಗಿನ) ಎಲ್ಲ ಜೀವಿಗಳಲ್ಲಿಯೂ ತನ್ನ ಆತ್ಮನನ್ನು ಮತ್ತು ಎಲ್ಲ ಜೀವಿಗಳನ್ನೂ ತನ್ನ ಆತ್ಮನಲ್ಲಿ ಏಕೀಭೂತವಾಗಿ ಕಾಣುತ್ತಾನೆ (ಭಗವದ್ಗೀತೆ 6.29)', ಎಂದೂ ಹೇಳಿದ್ದಾನೆ. ಹೀಗೆ ವಿವರಿಸಲ್ಪಟ್ಟಂತೆ ವೇದಾಂತಶಾಸ್ತ್ರದ ಬೆಳಕಿನಲ್ಲಿ ಸತ್ಯದ ಕುರಿತು ಗಾಢವಾದ ವಿಚಾರವನ್ನು ನಡೆಸಿದ ಬಳಿಕ, ತಾವೇ ಪರಬ್ರಹ್ಮ ಎಂಬ ದೃಢನಿಶ್ಚಯವನ್ನು ಗುರುಗಳು ಪಡೆದರು. ಅನಂತರ (ತಮ್ಮ ನಿರ್ಣಯವನ್ನು ಅಚ್ಚುಕಟ್ಟಾಗಿ ನಿರೂಪಿಸುವ ಭಗವತ್ಪಾದರ ಬ್ರಹ್ಮಾನುಚಿಂತನದ ಮೊದಲ ಶ್ಲೋಕದ ಪೂರ್ವಾರ್ಧವನ್ನು) ಮನಸ್ಸಿನಲ್ಲಿ ಹೇಳಿಕೊಂಡರು: '('ಅನೇಕ ಜನ್ಮಗಳ ಅಂತ್ಯದಲ್ಲಿ ಜ್ಞಾನದ ಪಕ್ವತೆಯನ್ನು ಹೊಂದಿದವನು ಸರ್ವವೂ ವಾಸುದೇವನೆಂದರಿತು ನನ್ನನ್ನು ಹೊಂದುತ್ತಾನೆ', ಎಂದು ಭಗವದ್ಗೀತೆಯ 7.19ರಲ್ಲಿ ಹೇಳಿರುವಂತೆ) ನಾನು ನಿಶ್ಚಯವಾಗಿ ವಾಸುದೇವನೆಂಬ ಪದದಿಂದ ತಿಳಿಯಲ್ಪಡುವ ಅವಿಕಾರಿ ಪರಬ್ರಹ್ಮ.' ಅನಂತರ ಕೂಡಲೇ ಅವರ ಮನಸ್ಸು ಅದ್ವಯವಾದ ಪರಬ್ರಹ್ಮದ ಮೇಲೆ ಗಾಢ ಧ್ಯಾನದಲ್ಲಿ ಏಕಾಗ್ರವಾಗಿ ಸ್ಥಿರಗೊಂಡಿತು.

ವಿಚಾರಞ್ಚ ಸಮಾಧಿಞ್ಚ ತೇಽಭ್ಯಸನ್ತೋ ದಿನೇ ದಿನೇ।
ಬ್ರಹ್ಮಣ್ಯಾಪುಃ ಪೂರ್ಣಿಮಾಯಾಂ ಸಮಾಧಿಂ ನಿರ್ವಿಕಲ್ಪಕಮ್ ॥ 60 ॥

ಮುಂದಿನ ದಿನಗಳಲ್ಲಿ, ಅವರು ತಪ್ಪದೆ ಬ್ರಹ್ಮವಿಚಾರದಲ್ಲೂ ಸಮಾಧಿಯಲ್ಲೂ ತೊಡಗಿಕೊಂಡರು. ಪೌರ್ಣಮಿಯಂದು (1935ರ ಡಿಸೆಂಬರ್ 10ರಂದು) ಅದ್ವಯ ಪರಬ್ರಹ್ಮದ ಮೇಲೆ ನಿರ್ವಿಕಲ್ಪ-ಸಮಾಧಿಯನ್ನು ಹೊಂದಿದರು.

ನಿರ್ವಿಕಲ್ಪಸಮಾಧಿಸ್ಥಾಃ ಪ್ರಥಮಾಯಾಮಯತ್ನತಃ।
ಚತುರ್ವಾರಂ ದಿವಾ ಭೂತ್ವಾಽಶೇಷರಾತ್ರೌ ತಥಾಽಭವನ್ ॥ 61 ॥

ಕೃಷ್ಣಪಕ್ಷದ ಪಾಡ್ಯದಂದು (ಮರುದಿನವಾದ 1935ರ ಡಿಸೆಂಬರ್ 11ರಂದು) ಯತ್ನವಿಲ್ಲದೆ ನಾಲ್ಕು ಬಾರಿ ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸಿದರು ಮತ್ತು ಇಡೀ ರಾತ್ರಿ ನಿರ್ವಿಕಲ್ಪ-ಸಮಾಧಿಯಲ್ಲೇ ಉಳಿದರು.

ಸಾಕ್ಷಾತ್ಕಾರ ಮತ್ತು ಜೀವನ್ಮುಕ್ತಿಯ ಪ್ರಾಪ್ತಿ — 1935ರ ಡಿಸೆಂಬರ್ 12

ಮಾರ್ಗಶೀರ್ಷೇऽಸಿತೇ ಪಕ್ಷೇ ದ್ವಿತೀಯಾಯಾಮಯತ್ನತಃ।
ಪೂರ್ವಾಪರಾಹ್ಣಯೋರಾಸನ್ನಸಮಾಧೌ ನಿರ್ವಿಕಲ್ಪಕೇ ॥ 62 ॥

ಮಾರ್ಗಶೀರ್ಷ ಕೃಷ್ಣಪಕ್ಷದ ಬಿದಿಗೆಯಂದು (ಅಂದರೆ, 1935ರ ಡಿಸೆಂಬರ್ 12ರಂದು) ಪರಮಪೂಜ್ಯ ಗುರುಗಳು ಪೂರ್ವಾಹ್ನದಲ್ಲಿ ಹಾಗೂ ಅಪರಾಹ್ನದಲ್ಲಿ ಯಾವುದೇ ಯತ್ನವಿಲ್ಲದೆ ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸಿದರು.

ಕೃತಯೋಗವಿಚಾರಾಭ್ಯಾಂ ವರ್ಧಮಾನೋ ದಿನೇ ದಿನೇ।
ತೇಷಾಂ ಸರ್ವಾತ್ಮಭಾವೋऽಭೂತ್ಸಿದ್ಧಪ್ರಾಯೋ ಮಹಾತ್ಮನಾಮ್ ॥ 63 ॥

ಅವರು ಕೈಗೊಳ್ಳುತ್ತಿದ್ದ ವಿಚಾರ ಮತ್ತು ಸಮಾಧಿಯಿಂದಾಗಿ, ಎಲ್ಲದರೊಂದಿಗಿನ ತಮ್ಮ ಅಭೇದಭಾವದ ಸ್ಥಿತಿ (ತಾವೇ ಆಗಿರುವ ಪರಬ್ರಹ್ಮ-ಆತ್ಮನಿಂದ ಭಿನ್ನವಾದುದು ಯಾವುದೂ ಇಲ್ಲವೆಂಬ ಜ್ಞಾನ) ದಿನದಿಂದ ದಿನಕ್ಕೆ ಪಕ್ವವಾಗುತ್ತಿತ್ತು ಮತ್ತು ಆ ಸಂಜೆಯ ವೇಳೆಗೆ ಬಹುತೇಕ ಪರಿಪೂರ್ಣವಾಗಿತ್ತು.

ಆದಿತ್ಯಾಸ್ತಮನಾತ್ಸಾರ್ಧಘಣ್ಟಾಯಾಃ ಪ್ರಾಙ್ನಗೋಪರಿ।
ಆಸನ್, ಯೋಗಮವಾಪ್ತುಂ ತೇ ಶಕ್ತಾ ಯದ್ಯಪಿ ತತ್ಕ್ಷಣೇ ॥ 64 ॥
ಪ್ರೇರಣಾತೋ ಭ್ರುವೋರ್ಮಧ್ಯಂ ಪಶ್ಯನ್ತೋ ಹೃದಯೇऽಗದನ್।
ಶಿವಪಞ್ಚಾಕ್ಷರೀಮನ್ತ್ರಂ ದಶಮ್ಯಾಂ ತೈಃ ಕೃತಂ ಯಥಾ ॥ 65 ॥
ದದೃಶುಶ್ಚೇನ್ದುಬಿಮ್ಬಾಭಂ ಜ್ಯೋತಿಸ್ತತ್ರ ಹಿ ಪೂರ್ವವತ್।
ತತಸ್ತೇಷಾಂ ಮತಿಃ ಸದ್ಯೋ ಬ್ರಹ್ಮಾಕಾರಾऽಚಲಾऽಭವತ್ ॥ 66 ॥

(ಅಂದು ಶೃಂಗೇರಿಯಲ್ಲಿ ಸೂರ್ಯಾಸ್ತದ ಸಮಯ ಸಂಜೆ 6:03ಕ್ಕೆ) ಸೂರ್ಯಾಸ್ತಕ್ಕೆ ಒಂದೂವರೆ ಗಂಟೆ ಮುನ್ನ ಬೆಟ್ಟದ ಶಿಖರವನ್ನು (ದೂರದ ಬೆಟ್ಟದಲ್ಲಿನ ಮಲಹಾನಿಕರೇಶ್ವರ ದೇವಾಲಯವು ಅಲ್ಲಿಂದ ಕಾಣಿಸುತ್ತಿದ್ದ ಸ್ಥಳವನ್ನು) ತಲುಪಿ (ಪಶ್ಚಿಮಾಭಿಮುಖವಾಗಿ) ಅಲ್ಲಿ ಕುಳಿತರು. ಆಗ ಅವರು ತಕ್ಷಣವೇ ಸಮಾಧಿಗೆ ಪ್ರವೇಶಿಸುವ ಸ್ಥಿತಿಯಲ್ಲಿದ್ದರೂ, ಭಗವತ್ಪ್ರೇರಣೆಯಿಂದ (ಅರೆಮುಚ್ಚಿದ) ತಮ್ಮ ಕಣ್ಣುಗಳನ್ನು ಭ್ರೂಮಧ್ಯದ ಕಡೆಗೆ ಇಟ್ಟು ಶುಕ್ಲ ದಶಮಿಯಂದು (1935ರ ಡಿಸೆಂಬರ್ 5ರಂದು ಶಿವನು ಅವರಿಗೆ ಉಪದೇಶ ನೀಡಿ, ಶೀಘ್ರದಲ್ಲಿಯೇ ಪರಬ್ರಹ್ಮದಲ್ಲಿ ಸ್ಥಿರವಾಗಿ ನೆಲೆನಿಲ್ಲುವೆಯೆಂದು ಅವರನ್ನು ಅನುಗ್ರಹಿಸಿದ ದಿನದಂದು) ಮಾಡಿದ್ದಂತೆಯೇ ಶಿವಪಂಚಾಕ್ಷರೀ ('ಓಂ ನಮಃ ಶಿವಾಯ') ಮಂತ್ರವನ್ನು ಮನಸ್ಸಿನಲ್ಲಿ ಜಪಿಸಿದರು. ಶುಕ್ಲ ದಶಮಿಯಂದಿನಂತೆ ಆ ಪ್ರದೇಶದಲ್ಲಿ ಚಂದ್ರಕಾಂತಿಯಂತೆ ವೃತ್ತಾಕಾರ ಮಂಡಲವನ್ನು ಅನುಭವಿಸಿದರು. ಅನಂತರ ಅದೇ ಕ್ಷಣದಲ್ಲಿ ಅವರ ಮನಸ್ಸು ಅದ್ವಯ ಪರಬ್ರಹ್ಮಸ್ವರೂಪದಲ್ಲಿ ಸಂಪೂರ್ಣವಾಗಿ ಸ್ಥಿರಗೊಂಡಿತು.

ಯದಾऽವಿಕಲ್ಪಯೋಗಾತ್ತೇ ವ್ಯುದಿತತಿಷ್ಠನ್ಮನಾಕ್ತದಾ ।
ತತ್ಸ್ಕನ್ಧಯೋಃ ಸುಖಾಸೀನೌ ಖಗೌ ತ ಉಪಲೇಭಿರೇ ॥ 67 ॥

ನಿರ್ವಿಕಲ್ಪ-ಸಮಾಧಿಯಿಂದ ಅವರ ಮನಸ್ಸು ಸ್ವಲ್ಪಮಟ್ಟಿಗೆ ಹೊರಬಂದಾಗ, ಎರಡು ಪಕ್ಷಿಗಳು ಅವರ ಭುಜಗಳ ಮೇಲೆ (ಎಡ ಮತ್ತು ಬಲಭುಜಗಳ ಮೇಲೆ ಒಂದೊಂದು) ನಿರಾಳವಾಗಿ ಕುಳಿತಿರುವುದನ್ನು ಅವರು ಗಮನಿಸಿದರು.

ಗನ್ತುಮಸ್ತಂ ಸಮಾರೇಭೇ ಸಹಸ್ರಕಿರಣಸ್ತದಾ ।
ತೇಷಾಮುದೇತುಂ ಸನ್ನದ್ಧೋ ಜ್ಞಾನಕಾಷ್ಠಾರವಿರ್ಹೃದಿ ॥ 68 ॥
ಸಾಕ್ಷಾತ್ಕಾರಮಹೋತ್ಪತ್ತಿಪ್ರತಿಬನ್ಧವಿಘಾತಿನಾಮ್ ।
ಪಾಣ್ಡಿತ್ಯಬಾಲ್ಯಮೌನಾನಾಂ ಪೂರ್ಣತ್ವಂ ತತ್ರ ಕಾರಣಮ್ ॥ 69 ॥

ಸೂರ್ಯನು ಮುಳುಗುತ್ತಿದ್ದನು. ಅವರ ಮನಸ್ಸಿನಲ್ಲಿ ಬ್ರಹ್ಮಜ್ಞಾನದ ಪರಮೋತ್ಕರ್ಷದ ಸೂರ್ಯನು ಉದಯಿಸಲು ಸಿದ್ಧವಾಗಿದ್ದನು. ಇದಕ್ಕೆ ಕಾರಣವೇನೆಂದರೆ, ಶಾಸ್ತ್ರದಲ್ಲಿ ನಿರ್ದಿಷ್ಟಪಡಿಸಲಾದ 'ಪಾಂಡಿತ್ಯ (ಅಂದರೆ,ಗುರುವಿನ ಮತ್ತು ಶಾಸ್ತ್ರದ ವಾಕ್ಯಗಳಿಂದ ಪ್ರಾಪ್ತವಾದ ತತ್ತ್ವಜ್ಞಾನ)', 'ಬಾಲ್ಯ (ಅಂದರೆ, ಭಗವತ್ಪಾದರು ತಮ್ಮ ಬೃಹದಾರಣ್ಯಕ-ಉಪನಿಷತ್ತಿನ ಭಾಷ್ಯದಲ್ಲಿ ವಿವರಿಸಿರುವಂತೆ, ಜ್ಞಾನದಿಂದುಂಟಾದ ಮತ್ತು ತನ್ಮೂಲಕ ವಿಷಯಗಳ ದರ್ಶನದಿಂದ ನಿವೃತ್ತಿಯನ್ನು ಹೊಂದುವ ಬಲ)' ಮತ್ತು 'ಮೌನ (ಅಂದರೆ, ದ್ವೈತ ಭಾವನೆಗಳ ನಿವೃತ್ತಿಯ ಪರ್ಯವಸಾನವಾಗಿ ಆತ್ಮನಲ್ಲಿ ಮನಸ್ಸಿನ ಸ್ಥಿರತೆ)' ಎಂಬ ತ್ರಯವನ್ನು ಅವರು ಸಂಪೂರ್ಣವಾಗಿ ಸಾಧಿಸಿದ್ದೂ, ಆ ತ್ರಯದ ಮೂಲಕ ಅದ್ವಯ ಬ್ರಹ್ಮದ ಸಾಕ್ಷಾತ್ಕಾರದ ಉದಯಕ್ಕೆ ಅಡ್ಡಿಯಾಗಿದ್ದ ಎಲ್ಲ ಪ್ರತಿಬಂಧಕಗಳು ನಿವೃತ್ತಿಯಾಗಿದ್ದೂ ಆಗಿತ್ತು.

ದ್ವಿತ್ರಕ್ಷಣಾನ್ತರೇ ಶ್ರೇಷ್ಠಂ ಬ್ರಹ್ಮಯೋಗಂ ಸಮಾವಿಶನ್ ।
ಸಮಜಾಯತ ನಿಃಶೇಷಪ್ರತಿಬನ್ಧವಿವರ್ಜಿತಮ್ ॥ 70 ॥
ಮಹಾವಾಕ್ಯಾರ್ಥವಿಜ್ಞಾನಂ ಯದಜ್ಞಾನಮಪಾನುದತ್ ।
ಸಾಕ್ಷಾತ್ಕೃತಪರಾತ್ಮಾನೋ ಜೀವನ್ಮುಕ್ತಾಸ್ತದಾಭವನ್ ॥ 71 ॥

ಮೇಲೆ ವಿವರಿಸಲ್ಪಟ್ಟ ಸಮಾಧಿಯ ಅವಧಿ ಮುಗಿದ ಒಂದೆರಡು ನಿಮಿಷಗಳ ಬಳಿಕ, ಅವರು ಬ್ರಹ್ಮದ ಮೇಲೆ ಸ್ವಚ್ಛ ನಿರ್ವಿಕಲ್ಪ-ಸಮಾಧಿಯನ್ನು ಪ್ರವೇಶಿಸಿದರು ಹಾಗೂ ('ತತ್ತ್ವಮಸಿ — ಅದು ನೀನಾಗಿದ್ದೀಯೆ' — ಎಂಬಂತಹ) ಉಪನಿಷತ್ತುಗಳ ಮಹಾವಾಕ್ಯಗಳಿಂದ ಪ್ರತಿಪಾದಿತವಾದ ಅದ್ವಯ ಬ್ರಹ್ಮದ, ಯಾವ ಪ್ರತಿಬಂಧವೂ ಇಲ್ಲದ, ಸಾಕ್ಷಾತ್ಕಾರವು ಅವರಲ್ಲಿ ವಿಕಸಿತವಾಯಿತು. ತನ್ಮೂಲಕ (ಮಿಥ್ಯಾಜ್ಞಾನದ ನಿಮಿತ್ತ ಸಂಸಾರಕ್ಕೆ ಕಾರಣವಾದ) ಮೂಲಾಜ್ಞಾನವು ನಶಿಸಿಹೋಯಿತು. ಅವರು ಪರಿಪೂರ್ಣ ಪ್ರಬುದ್ಧರೂ ಜೀವನ್ಮುಕ್ತರೂ (ಜೀವಂತವಾಗಿರುವಾಗಲೇ ಮುಕ್ತರು) ಆದರು.

ದೃಢಜ್ಞಾನವತಾಂ ತೇಷಾಂ ಕುತ್ರಚಿತ್ಕಾಽಪಿ ಜಾತುಚಿತ್।
ನೈವ ಸರ್ವಾತ್ಮಭಾವಸ್ಯ ಚ್ಯುತಿರ್ಜಾತಾ ತತಃ ಪರಮ್ ॥ 72 ॥

ಅನಂತರ, ದೃಢಜ್ಞಾನಿಗಳಾದ ಅವರಿಗೆ ಯಾವುದೇ ಸಮಯದಲ್ಲಿಯೂ, ಅತಿ ಸ್ವಲ್ಪ ಪ್ರಮಾಣದಲ್ಲಿಯೂ ಸಹ, ತಮ್ಮ ಸರ್ವಾತ್ಮಭಾವದ (ಬ್ರಹ್ಮಕ್ಕಿಂತ, ಅಂದರೆ ತಮ್ಮಿಂದ ಭಿನ್ನವಾದುದು ಏನೂ ಸರ್ವಥಾ ಇಲ್ಲವೆಂಬ ಅರಿವಿನ) ಸ್ಥಿತಿಯಿಂದ ಚ್ಯುತಿಯುಂಟಾಗಲಿಲ್ಲ.

ಗಿರೇಃ ಪ್ರತ್ಯಾಗತಾನ್ಸದ್ಯಃ ಪರಮಾ ಗುರವೋ ಗುರೂನ್।
ಆಲಿಙ್ಗ್ಯಾಹುಃ ‘ಪ್ರಹೃಷ್ಟೋಽಸ್ಮಿ ಮುಕ್ತ್ಯಾಪ್ತೇರ್ಭವತಾಮಥ ॥ 73 ॥
ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ದೃಷ್ಟೇ ಪರಾವರೇ ॥ 74 ॥
ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಚಾಪಿ ಸಮಶ್ನುತೇ।
ಯತ್ಸ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ॥ 75 ॥
ಆತ್ಮನ್ಯೇವ ಚ ಸನ್ತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ।
ಜೀವನ್ಮುಕ್ತಿಪರಾ ಏತಾ ವಾಚೋ ಯುಕ್ತಾ ಭವತ್ಸ್ವಿ’ತಿ ॥ 76 ॥

ಅವರು ಬೆಟ್ಟದಿಂದ ಇಳಿದು ತಮ್ಮ ಗುರುಗಳ ಬಳಿಗೆ ಹೋದಾಗ (ಅವರು ಒಂದು ಮಾತನ್ನೂ ಹೇಳುವುದಕ್ಕೆ ಮುನ್ನವೇ) ಅವರ ಗುರುಗಳು ತಕ್ಷಣವೇ ಅವರನ್ನು ಆಲಿಂಗಿಸಿ, ಹೀಗೆಂದರು: ‘ನನಗೆ ಬಹಳ ಸಂತೋಷವಾಗಿದೆ. “ಮರ್ತ್ಯನಾದವನು ಅನಂತರ ಅಮರನಾಗುತ್ತಾನೆ; ಈ ದೇಹದಲ್ಲಿರುವಾಗಲೇ ಬ್ರಹ್ಮವನ್ನು ಹೊಂದುತ್ತಾನೆ (ಬೃಹದಾರಣ್ಯಕ-ಉಪನಿಷತ್ 4.4.7)” ಮತ್ತು “ಆತ್ಮನಲ್ಲಿಯೇ ಆನಂದಿಸುವ, ಆತ್ಮನಿಂದಲೇ ತೃಪ್ತನಾಗಿರುವ ಮತ್ತು ಆತ್ಮನಲ್ಲಿಯೇ ಸಂತುಷ್ಟನಾಗಿರುವ ಆ ಜ್ಞಾನಿಗಾದರೋ, ನಿರ್ವಹಿಸಬೇಕಾದ ಯಾವುದೇ ಕರ್ತವ್ಯವಿಲ್ಲ (ಭಗವದ್ಗೀತೆ 3.17)” ಎಂಬಂತಹ ಜೀವನ್ಮುಕ್ತಿಗೆ ಸಂಬಂಧಿಸಿದ ಶಾಸ್ತ್ರವಾಕ್ಯಗಳು ನಿಮಗೀಗ ಸಮಗ್ರವಾಗಿ ಅನ್ವಯಿಸುತ್ತವೆ.’

ನಂತರ ಸಂಭವಿಸಿದ ಅಸಾಧಾರಣ ಘಟನೆ — 1935ರ ಡಿಸೆಂಬರ್ 12–15

ತದ್ದಿನೇ ಗುರುಭಿಃ ಪ್ರಾಪ್ತಾ ಮುಕ್ತಿರ್ನಾತಸ್ತತಃ ಪರಮ್।
ಅವಶಿಷ್ಟಮಭೂತ್ತೇಷಾಂ ಕಿಞ್ಚಿತ್ಸಾಧ್ಯಂ ಸಮಾಧಿನಾ ॥ 77 ॥
ನಿರ್ವಿಕಲ್ಪೇ ಸಮಾಧೌ ತೇ ನ್ಯವಸನ್ಬಹು ಚೇತ್ಯತಃ।
ಯೋಗಸಂಸ್ಕಾರಭೂಯಸ್ತ್ವಾತ್ತದಾ ತತ್ಪ್ರವಣಂ ಮನಃ ॥ 78 ॥

ಆ ಸಂಜೆ ಅವರು ಜೀವನ್ಮುಕ್ತಿಯನ್ನು ಹೊಂದಿದ್ದರಿಂದ, ಇನ್ನು ನಿರ್ವಿಕಲ್ಪ-ಸಮಾಧಿಯಲ್ಲಿ ತೊಡಗುವುದರ ಮೂಲಕ ಸಾಧಿಸಬೇಕಾದುದೇನೂ ಅವರಿಗೆ ಉಳಿದಿರಲಿಲ್ಲ. ಆದರೂ,

ಅವರು ಪುನಃ ಪುನಃ ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸಿದ್ದರಿಂದ, ನಿರ್ವಿಕಲ್ಪ-ಸಮಾಧಿಯಿಂದ ಉಂಟಾದ ಸಂಸ್ಕಾರಗಳು ಅವರ ಮನಸ್ಸಿನಲ್ಲಿ ಪ್ರಬಲವಾಗಿದ್ದವು. ಆದುದರಿಂದ, ಅವರ ಮನಸ್ಸು ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸುವುದರ ಕಡೆಗೆ ತೀವ್ರವಾಗಿ ಒಲಿಯುತ್ತಿತ್ತು.

ಅಕಾಮ್ಯೈರೇವ ಸಾ ರಾತ್ರಿಸ್ಸಮಾಧೌ ಗಮಿತಾ ಹಿ ತೈಃ।
ಪ್ರಾಯೇಣ ತಾಂಸ್ಮತೀಯಾಯಾಂ ಸಮಾಧ್ಯೋಗೋ ಹ್ಯವೀವಹತ್ ॥ 79 ॥
ಸಮಾಧಿಸ್ತಜ್ಜಸಂಸ್ಕಾರೋ ಯೋಗಪ್ರಾವಣ್ಯವರ್ಧನಮ್।
ಅಧಿಕಾವಧಿಕೋ ಯೋಗ ಇತ್ಥಂ ಯೋಗೋ ವ್ಯವರ್ಧತ ॥ 80 ॥

ಇದರಿಂದಾಗಿ, ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸುವ ಯಾವುದೇ ಉದ್ದೇಶವಿಲ್ಲದಿದ್ದರೂ, ಇಡೀ ರಾತ್ರಿ ನಿರ್ವಿಕಲ್ಪ-ಸಮಾಧಿಯಲ್ಲೇ ಉಳಿದರು. ಕೃಷ್ಣಪಕ್ಷದ ತದಿಗೆಯಂದು (1935ರ ಡಿಸೆಂಬರ್ 13ರಂದು), ಪ್ರಬಲವಾದ ಪ್ರವಾಹದಲ್ಲಿ ಕೊಚ್ಚಿಹೋಗುವವರಂತೆ, ಅವರು ಹೆಚ್ಚಿನ ಸಮಯ ಸಮಾಧಿಯಲ್ಲಿಯೇ ಉಳಿದರು. ನಿರ್ವಿಕಲ್ಪ-ಸಮಾಧಿಯಿಂದ ಉಂಟಾದ ಸಂಸ್ಕಾರಗಳು ಸಮಾಧಿಯತ್ತ ಅವರ ಒಲವನ್ನು ವರ್ಧಿಸಿದವು; ಆ ಹೆಚ್ಚಿದ ಒಲವು ಅವರನ್ನು ಮೇಲಾಗಿ ಸಮಾಧಿಯಲ್ಲಿ ನೆಲೆಸುವಂತೆ ಮಾಡಿತು. ಹೀಗೆ ನಿರ್ವಿಕಲ್ಪ-ಸಮಾಧಿಯಲ್ಲಿನ ಅವರ ನೆಲೆಸುವಿಕೆಯು ಹೆಚ್ಚುತ್ತಲೇ ಬಂತು.

ಚತುರ್ಥ್ಯಾಂ ಸರ್ವಥಾ ತೇಷಾಂ ದುಃಸಾಧ್ಯಾ ಅಭವನ್ಕ್ರಿಯಾಃ।
ಸ್ವಕೋಷ್ಠೇ ನಿಶಿತೇ ಯೋಗಂ ವಿವಶತ್ವಾತ್ಸಮಾವಿಶನ್ ॥ 81 ॥
ಸ್ವಗುರೂಚ್ಚರಿತೋಬ್ಜಾಕ್ಷರಂ ಶ್ರುತ್ವೋನ್ಮೀಲ್ಯ ವಿಲೋಚನೇ।
ಸ್ವಗುರೂನ್ಪುರಃ ಐಕ್ಷನ್ತ ಶೀರ್ಷೇ ನ್ಯಸ್ತಕರಾಮ್ಬುಜಾನ್ ॥ 82 ॥

ಕೃಷ್ಣ ಚತುರ್ಥಿಯಂದು (1935ರ ಡಿಸೆಂಬರ್ 14ರಂದು), (ಅವರು ಸಮಾಧಿಯಲ್ಲಿ ಇರದೆ ಅಚಲವಾಗಿ ಕುಳಿತಿದ್ದಾಗ ಮನಸ್ಸು ಬಹಳ ಅಂತರ್ಮುಖವಾಗಿದ್ದರಿಂದ) ಪ್ರತಿಯೊಂದು ಕ್ರಿಯೆಯನ್ನೂ ನಡೆಸುವುದು ಬಹುತೇಕ ಅಸಾಧ್ಯವಾಯಿತು. ಆ ರಾತ್ರಿ, ತಮ್ಮ ಖಾಸಗಿ ಕೊಠಡಿಯಲ್ಲಿ (ಕುಳಿತಾಗ) ಅತ್ಯಂತ ಗಂಭೀರವಾದ ನಿರ್ವಿಕಲ್ಪ-ಸಮಾಧಿಯಲ್ಲಿ ವಿವಶರಾಗಿ ಮುಳುಗಿಹೋದರು. ತಮ್ಮ ಗುರುಗಳ ಧ್ವನಿಯಲ್ಲಿ 'ಓಂ'ಕಾರದ ಉಚ್ಚಾರಣೆಯನ್ನು ಕೇಳಿದವರಾಗಿ ಈ ನಿರ್ವಿಕಲ್ಪ-ಸಮಾಧಿಯಿಂದ ಹೊರಬಂದರು. ಕಣ್ಣುಗಳನ್ನು ತೆರೆದಾಗ, ತಮ್ಮ ಮುಂದೆ ತಮ್ಮ ಗುರುಗಳು ಕುಳಿತಿರುವುದನ್ನೂ, ಅವರ ಹಸ್ತವು ತಮ್ಮ ತಲೆಯ ಮೇಲಿರುವುದನ್ನೂ ಕಂಡರು.

ಅವೋಚನ್ಕರಮುತ್ಕ್ಷಿಪ್ಯ ಪರಮಾ ಗುರವೋ ಗುರೂನ್।
'ವರ್ಧಮಾನಂ ಭವದ್ಯೋಗಂ ಪಶ್ಯನ್ನಪಿ ದಿನದ್ವಯಾತ್ ॥ 83 ॥

ನಾಕಾರ್ಷಂ ಕಿಞ್ಚಿದಾಖ್ಯಾಂ ವಾ, ಮಹೇಶೋ ಮಾಮವೇದಯತ್।
ಭವತೋಽಯಂ ಸಮಾಧಿರ್ಹಿ ತಿಷ್ಠೇದಾಮರಣಂ ಯದಿ ॥ 84 ॥
ನೋತ್ಥಾಪಿತಾ ಭವನ್ನೋಽನ್ಯಾದಪರೇಣೇತ್ಯತೋ ಮಯಾ।
ಮಹತೈವ ಪ್ರಯತ್ನೇನ ವ್ಯುತ್ಥಿತಿಃ ಸಾಧಿತಾಽಧುನಾ ॥ 85 ॥
ಮದರ್ಥಞ್ಚ ಜನಾರ್ಥಞ್ಚ ನ ತ್ಯಜನ್ತು ಕಲೇವರಮ್।
ಕುರ್ವನ್ತು ಚ ಯಥಾಯೋಗ್ಯಮಿ'ತಿ ತದ್ಗುರುಭಿಃ ಕೃತಮ್ ॥ 86 ॥
ಅಪಾರಗುರುಭಕ್ತ್ಯಾಽಽಶು ಯೋಗಪ್ರವಣತಾ ಜಿತಾ।
ತದ್ದಿನೇ ಯೋಗಮತ್ಯಾಕ್ಷ್ಣುರ್ನಿಯತಃ ಸ ತತೋಽಭವತ್ ॥ 87 ॥

ಅವರ ಗುರುಗಳು ಅವರಿಗೆ ಹೀಗೆ ಹೇಳಿದರು: 'ಎರಡು ದಿನಗಳಿಂದೀಚೆಗೆ ನಿರ್ವಿಕಲ್ಪ-ಸಮಾಧಿಯಲ್ಲಿ ನಿಮ್ಮ ನೆಲೆಸುವಿಕೆಯು ಹೆಚ್ಚುತ್ತಲೇ ಇರುವುದನ್ನು ನಾನು ಗಮನಿಸಿದ್ದೇನೆ. ಅದರ ಬಗ್ಗೆ ನಾನು ಏನನ್ನೂ ಹೇಳಲಿಲ್ಲ ಅಥವಾ ಮಾಡಲಿಲ್ಲ. ಆದರೆ, ಯಾರಾದರೂ ನಿಮ್ಮನ್ನು ಈ ನಿರ್ವಿಕಲ್ಪ-ಸಮಾಧಿಯಿಂದ ಹೊರತರದಿದ್ದರೆ, ನೀವಿನ್ನು ಮರಣದವರೆಗೂ ಅದರಿಂದ ಹೊರಬರುವುದಿಲ್ಲ ಎಂಬುದಾಗಿ ಭಗವಂತನು ನನಗೆ ತಿಳಿಸಿದನು. ಅದಕ್ಕಾಗಿಯೇ ಬಹಳ ಶ್ರಮಪಟ್ಟು ಈಗ ನಿಮ್ಮನ್ನು ಸಮಾಧಿಯಿಂದ ಎಬ್ಬಿಸಿದ್ದೇನೆ. ನನ್ನ ಸಲುವಾಗಿಯೂ, ಅನೇಕರ ಸಲುವಾಗಿಯೂ, ನಿಮ್ಮ ಶರೀರವನ್ನು ತ್ಯಜಿಸಬೇಡಿ. ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸುವ ತೀವ್ರವಾದ ಪ್ರವೃತ್ತಿಯನ್ನು ನಿಯಂತ್ರಿಸಿಕೊಳ್ಳಿ.' ನನ್ನ ಗುರುಗಳು ತಮ್ಮ ಗುರುಗಳು ನೀಡಿದ್ದ ಸಲಹೆಯನ್ನು ಕಾರ್ಯರೂಪಕ್ಕೆ ತಂದರು. ಸಮಾಧಿಯತ್ತ ಅವರ ಪ್ರಬಲ ಪ್ರವೃತ್ತಿಯನ್ನು ಅವರ ಅಪಾರ ಗುರುಭಕ್ತಿಯು ಹಿಮ್ಮೆಟ್ಟಿತು. ಆ ದಿನ ಅವರು ತಮ್ಮನ್ನು ಸಮಾಧಿಯಿಂದ ದೂರವಿಟ್ಟರು. ಮರುದಿನದ ವೇಳೆಗೆ, ಸಮಾಧಿಯ ಅವಧಿಯನ್ನು (ಹಿಂದಿನಂತೆ) ನಿಯಂತ್ರಿಸಲು ಅವರಿಗೆ ಸಾಧ್ಯವಾಯಿತು.

ಅಹುಸ್ತಾನ್ಪರಮಾಚಾರ್ಯಾ'ಸ್ತದಕಾರ್ಷುರ್ಯದೈಷಿಷಮ್।
ಭವನ್ತ ಇಹ ವರ್ತನ್ತಾಂ ಯಥಾऽಽಸನ್ಗುರವೋ ಮಮ ॥ 88 ॥
ಯೋಗಪ್ರವಣತಾಂ ತೀವ್ರಾಂ ವಶ್ಯಕುರ್ವನ್ಗುರೂಕ್ತಿತಃ।
ಸರ್ವಕರ್ತವ್ಯಶೂನ್ಯಾಶ್ಚ ಬ್ರಹ್ಮಣ್ಯೇವ ಪ್ರತಿಷ್ಠಿತಾಃ ॥ 89 ॥
ಶಾಸ್ತ್ರಪಾಣ್ಡಿತ್ಯಸೀಮಸ್ಥಾಃ ವರ್ಧಿತಮಠಕೀರ್ತಯಃ।
ಲೋಕಹೃದ್ದಾರಿಣಶ್ಚಾಸಂಸ್ತೇ ಯಥೋಚಿತಚಾರಿಣಃ ॥ 90 ॥
ಅನ್ತಃ ಸಂತ್ಯಕ್ತಸರ್ವಾಶೋ ವೀತರಾಗೋ ವಿವಾಸನಃ।
ಬಹಿಃ ಸರ್ವಸಮಾಚಾರೋ ಲೋಕೇ ವಿಹರ ರಾಘವ ॥ 91 ॥
ಬಹಿಃ ಕೃತ್ರಿಮಸಂರಮ್ಭೋ ಹೃದಿ ಸಂರಮ್ಭವರ್ಜಿತಃ।
ಕರ್ತಾಬಹಿರಕರ್ತಾನ್ತರ್ಲೋಕೇ ವಿಹರ ರಾಘವ ॥ 92 ॥

ಏವಂ ಹ್ಯುಪಾದಿಶದ್ರಾಮಂ ವಸಿಷ್ಠ ಇತಿ ಪಠ್ಯತೇ।
ಭವನ್ನೋಽತ್ರ ಯಥಾದಿಷ್ಟಂ ಲೋಕಕ್ಷೇಮಾಯ ಸನ್ತ್ವಿ'ತಿ ॥ 93 ॥

ಅನಂತರ ಅವರು ತಮ್ಮ ಗುರುಗಳ ಸನ್ನಿಧಿಗೆ ಹೋದಾಗ, ತಮ್ಮ ಗುರುಗಳು ಅವರಿಗೆ ಹೀಗೆಂದರು: 'ನಾನು ಬಯಸಿದ್ದನ್ನು ನೀವು ನೆರವೇರಿಸುವಿರಿ. ನನ್ನ ಪೂಜ್ಯ ಗುರುಗಳು (ಪರಮಪೂಜ್ಯ ಜಗದ್ಗುರು ಶ್ರೀ ಸಚ್ಚಿದಾನಂದ-ಶಿವಾಭಿನವ-ನೃಸಿಂಹ-ಭಾರತೀ ಮಹಾ-ಸ್ವಾಮಿಗಳು) ಲೋಕದಲ್ಲಿ ಹೇಗೆ ವರ್ತಿಸಿದರೋ, ನೀವು ಹಾಗೆಯೇ ವರ್ತಿಸಬೇಕು. ತಮ್ಮ ಗುರುಗಳ (ಪರಮಪೂಜ್ಯ ಜಗದ್ಗುರು ಶ್ರೀ ನೃಸಿಂಹ-ಭಾರತೀ ಮಹಾಸ್ವಾಮಿಗಳ) ಆಜ್ಞೆಗೆ ಪ್ರತಿಕ್ರಿಯೆಯಾಗಿ, ಅವರು ನಿರ್ವಿಕಲ್ಪ-ಸಮಾಧಿಯಲ್ಲಿ ದೀರ್ಘಕಾಲ ನೆಲೆಸುವ ತಮ್ಮ ತೀವ್ರ ಪ್ರವೃತ್ತಿಯನ್ನು ನಿಯಂತ್ರಿಸಿಕೊಂಡರು. ಪರಬ್ರಹ್ಮದಲ್ಲಿ ಪರಿಪೂರ್ಣವಾಗಿ ಪ್ರತಿಷ್ಠಿತರಾಗಿದ್ದು, ತಾವು ಏನನ್ನೂ ಮಾಡಬೇಕಾದ ಅಗತ್ಯವನ್ನು ಮೀರಿದ್ದರೂ, ಶಾಸ್ತ್ರಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಗಳಿಸಿದರು, ಮಠಕ್ಕೆ ಮಹತ್ಕೀರ್ತಿಯನ್ನು ತಂದರು, ಎಲ್ಲರ ಹೃದಯಗಳನ್ನೂ ಸೂರೆಗೊಂಡರು ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಯಥೋಚಿತವಾಗಿ ವರ್ತಿಸಿದರು. ವಸಿಷ್ಠ ಮಹರ್ಷಿಗಳು ಶ್ರೀರಾಮನಿಗೆ ಹೀಗೆ ಉಪದೇಶಿಸಿದರೆಂದು (ಯೋಗ-ವಾಸಿಷ್ಠದಲ್ಲಿ) ಹೇಳಲಾಗಿದೆ: "ಹೇ ರಾಘವ, ಭವಿಷ್ಯಕ್ಕೆ ಸಂಬಂಧಿಸಿದ ಎಲ್ಲ ಬಯಕೆಗಳಿಂದ ಅಂತರಂಗದಲ್ಲಿ ಮುಕ್ತನಾಗಿ, ವರ್ತಮಾನಕ್ಕೆ ಯಾವುದರಲ್ಲಿಯೂ ಅಂಟದೆ ಮತ್ತು ಗತಕಾಲದಿಂದ ಉದ್ಭವಿಸಿದ ಸಂಸ್ಕಾರಗಳಿಂದ ಮುಕ್ತನಾಗಿ, ಆದರೂ ಬಾಹ್ಯವಾಗಿ ಎಲ್ಲ ಆಚಾರಗಳನ್ನು ಅನುಸರಿಸುತ್ತಾ ಲೋಕದಲ್ಲಿ ವಿಹರಿಸು (ಲಘು-ಯೋಗ-ವಾಸಿಷ್ಠ 5.2.56). ಹೇ ರಾಘವ, ಹೊರಗಿನಿಂದ ಆಸಕ್ತಿ, ಕ್ರೋಧ ಮೊದಲಾದವುಗಳನ್ನು ತೋರ್ಪಡಿಸುತ್ತ, ಆದರೂ ಹೃದಯದಲ್ಲಿ ಯಾವುದೇ ಕ್ಷೋಭೆಯಿಲ್ಲದೆ, ಬಾಹ್ಯವಾಗಿ ಕರ್ತೃನಂತೆಯಾದರೂ ಅಂತರಂಗದಲ್ಲಿ ಅಕರ್ತೃನಾಗಿ ಲೋಕದಲ್ಲಿ ವಿಹರಿಸು (ಲಘು-ಯೋಗ-ವಾಸಿಷ್ಠ 5.2.57)." ಲೋಕದ ಹಿತಕ್ಕಾಗಿ ನೀವು ಹೀಗೆಯೇ ಇರಿ.'

<u>ಬ್ರಹ್ಮಸಾಕ್ಷಾತ್ಕಾರದಲ್ಲಿ ಪರ್ಯವಸಾನಗೊಳ್ಳುವ ಸಾಧನೆ — ಮಾನುಷರೂಪದಲ್ಲಿ ಭಗವಂತನ ಕೇವಲ ದಿವ್ಯಲೀಲೆ</u>

ಪ್ರಾಹುಶ್ಚ ಪರಮಾಚಾರ್ಯಾ ಧಾತುವರ್ಷೇ ಸ್ವಯಂ ಗುರೂನ್।
'ಭವನ್ತಂ ವೇದ್ಮಿ ವಿಶ್ವೇಶಂ ಲೀಲಾಂ ಮುಕ್ಯರ್ಥಕೋದ್ಯಮಮ್ ॥ 94 ॥
ವರಮಿವ ಚ ಕೃಷ್ಣಾಪ್ತಂ ಭವಲ್ಲಬ್ಧಾಂ ಶಿವಾಶಿಷಮ್'।
ತತೋಽಶಂಸನ್ಗುರೂನ್ವದ್ಯೇ ಸುಭಾನುಶರದಾಶ್ವಿನೇ ॥ 95 ॥
ಪ್ರಣವವಿದಿತಂ ಬ್ರಹ್ಮಾಕಾರಂ ವಿಘ್ನಹರಂ ಬುಧಾಃ।
ಕಲಯತ ದಯಾಸಾನ್ದ್ರಂ ವಿದ್ಯಾತೀರ್ಥಗುರುಂ ಹೃದಿ ॥ 96 ॥

(ಕೆಲವು ತಿಂಗಳುಗಳ ಬಳಿಕ, ನನ್ನ ಪೂಜ್ಯ ಗುರುಗಳು ತಮ್ಮ ಗುರುಗಳ ಆಜ್ಞೆಯಂತೆ ಕೆಲವು ತಿಂಗಳುಗಳ ಕಾಲ ಬೆಂಗಳೂರಿಗೆ ತೆರಳಿದರು. ಅದಕ್ಕೆ ಸ್ವಲ್ಪ ಮುನ್ನ) ಧಾತು-ಸಂವತ್ಸರದಲ್ಲಿ (1936–37) ಅವರ ಗುರುಗಳು ತಾವಾಗಿಯೇ ಅವರಿಗೆ ಹೀಗೆ ನುಡಿದರು: 'ನೀವು ವಾಸ್ತವವಾಗಿ ಸಾಕ್ಷಾತ್ ಪರಮೇಶ್ವರನೇ ಆಗಿದ್ದೀರಿ. ಮುಕ್ತಿಗಾಗಿ ನೀವು ಕೈಗೊಂಡ ಸಮಗ್ರ ಆಧ್ಯಾತ್ಮಿಕ ಸಾಧನೆಗಳು ನಿಮ್ಮ ದಿವ್ಯಲೀಲೆಯಷ್ಟೇ ಆಗಿದ್ದವು. ನೀವು (1935ರ ಡಿಸೆಂಬರ್ 5ರಂದು) ಶಿವನನ್ನು ಪ್ರತ್ಯಕ್ಷವಾಗಿ ದರ್ಶಿಸಿ ಅವನ ಅನುಗ್ರಹವನ್ನು ಪಡೆದದ್ದೂ (ಮಹಾ-ಭಾರತದ ಅನುಶಾಸನ-ಪರ್ವದಲ್ಲಿ ವರ್ಣಿಸಿರುವಂತೆ) ಕೃಷ್ಣನು ಪ್ರತ್ಯಕ್ಷ ಶಿವದರ್ಶನ ಮತ್ತು ವರವನ್ನು ಪಡೆದುದಕ್ಕೆ ಸಮಾನವಾದ ಲೀಲೆಯಷ್ಟೇ ಆಗಿತ್ತು ಎಂಬುದು ನನಗೆ ತಿಳಿದಿದೆ.' ಹಲವು ವರ್ಷಗಳ ಬಳಿಕ, ಸುಭಾನು-ಸಂವತ್ಸರದ ಆಶ್ವಯುಜದಲ್ಲಿ (30.9.1943–29.10.1943ರ ಅವಧಿಯಲ್ಲಿ) ಅವರು ತಮ್ಮ ಶಿಷ್ಯರ ಕುರಿತು ರಚಿಸಿದ ಶ್ಲೋಕವೊಂದರಲ್ಲಿ ಹೀಗೆಂದಿದ್ದಾರೆ: 'ಓ ಬುದ್ಧಿವಂತರೆ, ಪರಬ್ರಹ್ಮದ ಸ್ವರೂಪವೇ ಆದ, ಪ್ರಣವದ (ಓಂಕಾರದ) ಮೂಲಕ ತಿಳಿಯಲ್ಪಟ್ಟ, (ತಮ್ಮ ಅತಿಪವಿತ್ರವಾದ ಕಟಾಕ್ಷಗಳಿಂದ) ವಿಘ್ನಗಳನ್ನು (ವಿಘ್ನಗಳ ಪರ್ವತವನ್ನು) ನಾಶಗೊಳಿಸುವ, (ಶಾಂತಚಿತ್ತರಾದ, ಎಳೆಯ ವಯಸ್ಸಿನ,) ದಯೆಯಿಂದ ತುಳುಕುತ್ತಿರುವ ಗುರುಗಳಾದ ವಿದ್ಯಾತೀರ್ಥರನ್ನು ನಿಮ್ಮ ಹೃದಯಕಮಲದಲ್ಲಿ ನೆಲೆನಿಲ್ಲಿಸಿ.'

ತೇಷಾಂ ಲೋಕೋತ್ತರಾಣಾಞ್ಚ ನಿಸ್ಸೀಮಮಹಿಮಾವತಾಮ್।
ಯಶ್ಶಿಷ್ಯಾಚಾರ್ಯಸಮ್ಬನ್ಧೋ ನೂನಂ ಸೋಽನುಪಮೋದ್ಭುತಃ ॥ 97 ॥

ನನ್ನ ಪರಮಪೂಜ್ಯ ಗುರುಗಳು ಮತ್ತು ಅವರ ಗುರುಗಳು — ಯಾರಿಬ್ಬರೂ ಲೌಕಿಕ ಮಿತಿಗಳನ್ನು ಮೀರಿದವರೋ, ಅಪರಿಮಿತ ಮಹಿಮೆಯಿಂದ ಕೂಡಿದವರೋ — ಅವರ ಪರಸ್ಪರ ಸಂಬಂಧವು ನಿಜಕ್ಕೂ ಅನನ್ಯವೂ ಅದ್ಭುತವೂ ಆಗಿತ್ತು.

ಭಿದ್ಯತೇ ಹೃದಯಗ್ರನ್ಥಿರ್ಯಷ್ಟೇ ಯಸ್ಮಿನ್ನಿತಿ ಶ್ರುತಿಃ।
ಜಗೌ ಪರಾವರಂ ಶಾನ್ತಂ ತಂ ವಿದ್ಯಾತೀರ್ಥಮಾಶ್ರಯೇ ॥ 98 ॥
ದ್ಯಾವಾಭೂಮೀ ಹಿ ಜನಯನ್ದೇವ ಏಕ ಇತಿ ಶ್ರುತಿಃ।
ಯಂ ವರ್ಣಯತಿ ಸರ್ವೇಶಂ ತಂ ವಿದ್ಯಾತೀರ್ಥಮಾಶ್ರಯೇ ॥ 99 ॥
ಇತ್ಥಂ ಬ್ರಹ್ಮೇಶ್ವರತ್ವೇನ ಗುರವಃ ಸಾಧು ಸಂಸ್ತುತಾಃ।
ತಚ್ಛಿಷ್ಯೈರ್ಭಾರತೀತೀರ್ಥೈಸ್ತನ್ಮಾಹಾತ್ಮ್ಯಸುವೇದಿಭಿಃ ॥ 100 ॥

ಗುರುಗಳ ಶಿಷ್ಯರಾದ ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ತಮ್ಮ ಗುರುಗಳ ಮಹಿಮೆಯನ್ನು ನಿಸ್ಸಂದಿಗ್ಧವಾಗಿ ಅರಿತವರಾಗಿದ್ದು (ತಮ್ಮ ಗುರುಗಳನ್ನು ಕುರಿತಾದ ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರದಲ್ಲಿ), ತಮ್ಮ ಗುರುಗಳನ್ನು ಪರಬ್ರಹ್ಮವೆಂದೂ, ಈಶ್ವರನಿಗಿಂತ ಬೇರೆಯಲ್ಲವೆಂದೂ ಹೀಗೆ ಸ್ತುತಿಸಿದ್ದಾರೆ: 'ಯಾರ ಕುರಿತು,

“ಯಾರನ್ನು ಸಾಕ್ಷಾತ್ಕರಿಸಿಕೊಂಡ ಬಳಿಕ, ಹೃದಯದ ಕಗ್ಗಂಟು (ಬಯಕೆಗಳ ರೂಪದಲ್ಲಿ ತಲೆಯೆತ್ತುವ, ಅಜ್ಞಾನದ ಮೂಲಕ ಆತ್ಮನನ್ನು ದೇಹ-ಮನಸ್ಸಿನ ಸಂಘಾತದೊಂದಿಗೆ ತಾದಾತ್ಮ್ಯಗೊಳಿಸಿಕೊಳ್ಳುವಿಕೆ) ಕಡಿದುಹೋಗುತ್ತದೆ (ಮುಂಡಕ-ಉಪನಿಷತ್ 2.2.8)”, ಮತ್ತು (ಅದೇ ಮುಂಡಕ-ಉಪನಿಷತ್ತಿನ ಮೇಲ್ಕಂಡ ಮಂತ್ರದಲ್ಲಿ) ಯಾರು ಉಭಯಥಾ (ಕಾರಣದ ರೂಪದಲ್ಲಿ) ಉತ್ಕೃಷ್ಟನೂ, (ಕಾರ್ಯದ ರೂಪದಲ್ಲಿ) ನಿಕೃಷ್ಟನೂ ಆದ ಪುರುಷನೆಂದು ಶ್ರುತಿಯು ಘೋಷಿಸಿದೆಯೋ, ಆ ಶಾಂತಸ್ವರೂಪರಾದ (ಪರಮಪೂಜ್ಯ ಜಗದ್ಗುರು ಶ್ರೀ) ವಿದ್ಯಾತೀರ್ಥರನ್ನು ನಾನು ಆಶ್ರಯಿಸುತ್ತೇನೆ. “ಆಕಾಶ ಮತ್ತು ಭೂಮಿಗಳನ್ನು ಸೃಷ್ಟಿಸುವ ಏಕೈಕ ದೇವತೆ...(ಶ್ವೇತಾಶ್ವತರ-ಉಪನಿಷತ್ 3.3)”, ಎಂದು ಶ್ರುತಿಯು ವರ್ಣಿಸುವ ಸಕಲಕ್ಕೂ ಪರಮೇಶ್ವರರಾದ ವಿದ್ಯಾತೀರ್ಥರನ್ನು ನಾನು ಶರಣಾಗುತ್ತೇನೆ.’



॥ ಓಂ ಪರಮಪೂಜ್ಯಸದ್ಗುರುಚರಣಾರವಿನ್ದಾರ್ಪಣಮಸ್ತು ॥

ಅನುಬಂಧ

<u>ಅರ್ಥತಃ ನಿರೂಪಿಸಲ್ಪಟ್ಟ ವಾಕ್ಯಗಳು ಮತ್ತು ಶ್ಲೋಕಗಳು</u>

ಶ್ಲೋಕ 9–10ರಲ್ಲಿ (ಪುಟ 3):

ಭೂರಮ್ಬಾಂಸ್ಯನಲೋಽನಿಲೋಽಮ್ಬರಮಹರ್ನಾಥೋ ಹಿಮಾಂಶುಃ ಪುಮಾ-
ನಿತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಮ್।
ನಾನ್ಯತ್ಕಿಞ್ಚನ ವಿದ್ಯತೇ ವಿಮೃಶತಾಂ ಯಸ್ಮಾತ್ಪರಸ್ಮಾದ್ವಿಭೋ-
ಸ್ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ॥

(ಶ್ರೀದಕ್ಷಿಣಾಮೂರ್ತಿ-ಸ್ತೋತ್ರ 9)

ಶ್ಲೋಕ 13–14ರಲ್ಲಿ (ಪುಟ 3–4):

ಶಾನ್ತಂ ಪದ್ಮಾಸನಸ್ಥಂ ಶಶಧರಮುಕುಟಂ ಪಞ್ಚವಕ್ತ್ರಂ ತ್ರಿನೇತ್ರಂ
ಶೂಲಂ ವಜ್ರಂ ಚ ಖಡ್ಗಂ ಪರಶುಮಭಯದಂ ದಕ್ಷಭಾಗೇ ವಹನ್ತಮ್।
ನಾಗಂ ಪಾಶಂ ಚ ಘಣ್ಟಾಂ ಪ್ರಲಯಹುತವಹಂ ಸಾಙ್ಕುಶಂ ವಾಮಭಾಗೇ
ನಾನಾಲಙ್ಕಾರಯುಕ್ತಂ ಸ್ಫಟಿಕಮಣಿನಿಭಂ ಪಾರ್ವತೀಶಂ ನಮಾಮಿ॥

(ಸಾಂಬಸದಾಶಿವ-ಪಂಚಾಕ್ಷರೀ-ಮಂತ್ರದ ಧ್ಯಾನಶ್ಲೋಕ)

ಶ್ಲೋಕ 20ರಲ್ಲಿ (ಪುಟ 5):

ವತ್ಸ, ಶ್ವಃಪ್ರಭೃತ್ಯತ್ರ ನಿರಾಕಾರೇ ಪರೇ ತತ್ತ್ವೇ ಮನಃ ಸಮಾಧತ್ಸ್ವ । ಅಚಿರೇಣ ಬ್ರಹ್ಮಸಂಸ್ಥೋ ಭವಿಷ್ಯಸಿ।

(ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳಿಗೆ ಶಿವನ ಮಾತು)

ಶ್ಲೋಕ 23–24ರಲ್ಲಿ (ಪುಟ 5–6):

ಸ್ಫಟಿಕರಜತವರ್ಣಂ ಮೌಕ್ತಿಕೀಮಕ್ಷಮಾಲಾ-
ಮಮೃತಕಲಶವಿದ್ಯಾಜ್ಞಾನಮುದ್ರಾಃ ಕರಾಬ್ಜೈಃ।
ದಧತಮುರುಗಕಕ್ಷಂ ಚನ್ದ್ರಚೂಡಂ ತ್ರಿನೇತ್ರಂ
ವಿಧೃತವಿವಿಧಭೂಷಂ ದಕ್ಷಿಣಾಮೂರ್ತಿಮೀಡೇ॥

(ಮೇಧಾ-ದಕ್ಷಿಣಾಮೂರ್ತಿ-ಮಂತ್ರದ ಧ್ಯಾನಶ್ಲೋಕ)

ಶ್ಲೋಕ 28ರಲ್ಲಿ (ಪುಟ 6–7):
ಬ್ರಹ್ಮವಿದಾಪ್ನೋತಿ ಪರಮ್।

(ತೈತ್ತಿರೀಯ-ಉಪನಿಷತ್ 2.1.1)

ಆನನ್ದಂ ಬ್ರಹ್ಮಣೋ ವಿದ್ವಾನ್। ನ ಬಿಭೇತಿ ಕದಾಚನೇತಿ।

(ತೈತ್ತಿರೀಯ-ಉಪನಿಷತ್ 2.4.1)

ಯದಾ ಹ್ಯೇವೈಷ ಏತಸ್ಮಿನ್ನುದರಮನ್ತರಂ ಕುರುತೇ। ಅಥ ತಸ್ಯ ಭಯಂ ಭವತಿ।

(ತೈತ್ತಿರೀಯ-ಉಪನಿಷತ್ 2.7.1)

ಶ್ಲೋಕ 51ರಲ್ಲಿ (ಪುಟ 11):
ಸತ್ಯಂ ಜ್ಞಾನಮನನ್ತಂ ಬ್ರಹ್ಮ।

(ತೈತ್ತಿರೀಯ-ಉಪನಿಷತ್ 2.1.1)

ಶ್ಲೋಕ 53ರಲ್ಲಿ (ಪುಟ 11–12):
ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಮ್ಭೂತಃ। ಆಕಾಶಾದ್ವಾಯುಃ। ವಾಯೋರಗ್ನಿಃ। ಅಗ್ನೇರಾಪಃ। ಅದ್ಭ್ಯಃ ಪೃಥಿವೀ।

(ತೈತ್ತಿರೀಯ-ಉಪನಿಷತ್ 2.1.1)

ಶ್ಲೋಕ 54ರಲ್ಲಿ (ಪುಟ 11– 12):
ಯತೋ ವಾ ಇಮಾನಿ ಭೂತಾನಿ ಜಾಯನ್ತೇ। ಯೇನ ಜಾತಾನಿ ಜೀವನ್ತಿ। ಯತ್ಪ್ರಯನ್ತ್ಯಭಿ-ಸಂವಿಶನ್ತಿ। ತದ್ವಿಜಿಜ್ಞಾಸಸ್ವ। ತದ್ಬ್ರಹ್ಮೇತಿ।

(ತೈತ್ತಿರೀಯ-ಉಪನಿಷತ್ 3.1.1)

ಶ್ಲೋಕ 56ರಲ್ಲಿ (ಪುಟ 12–13):
ಸ ಯಶ್ಚಾಯಂ ಪುರುಷೇ। ಯಶ್ಚಾಸಾವಾದಿತ್ಯೇ। ಸ ಏಕಃ।

(ತೈತ್ತಿರೀಯ-ಉಪನಿಷತ್ 2.8.5)

ಶ್ಲೋಕ 75ರಲ್ಲಿ (ಪುಟ 16):
ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತ ಇತಿ।

(ಬೃಹದಾರಣ್ಯಕ-ಉಪನಿಷತ್ 4.4.7)

ಶ್ಲೋಕ 96ರಲ್ಲಿ (ಪುಟ 19–20):
ದಯಾಸಾನ್ದ್ರಂ ಬಾಲಂ ನಿಖಿಲಜಗತೀರಕ್ಷಣಚಣಂ
ಹರನ್ತಂ ವಿಘ್ನಾದ್ರಿಂ ವಿಮಲವಿಮಲೈರ್ವೀಕ್ಷಣಚಯೈಃ।
ಪರಬ್ರಹ್ಮಾಕಾರಂ ಪ್ರಣವವಿದಿತಂ ಶಾನ್ತಮನಸಂ
ಗುರುಂ ವಿದ್ಯಾತೀರ್ಥಂ ಕಲಯತ ಬುಧಾಶ್ಚಿತ್ತಕಮಲೇ॥

(ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ರಚನೆ)

*****

